ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಜೂನ್ 02, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 19 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಶಾಲಾ-ಕಾಲೇಜುಗಳಲ್ಲಿ ಪ್ರವೇಶ ಕಾರ್ಯ ಚುರುಕು

ದಾವಣಗೆರೆ, ಜೂ.1- ಜಿಲ್ಲಾದ್ಯಂತ ಶಾಲಾ-ಕಾಲೇಜುಗಳಲ್ಲಿ ಪ್ರವೇಶ ಕಾರ್ಯ ಭರದಿಂದ ನಡೆಯುತ್ತಿದೆ. ಶಾಲಾ-ಕಾಲೇಜಿನ ಮುಂಭಾಗ ಪೋಷಕರು ವಿದ್ಯಾರ್ಥಿಗಳೊಂದಿಗೆ ಆಗಮಿಸಿ, ಅರ್ಜಿಗಳನ್ನು ಪಡೆದು ಭರ್ತಿ ಮಾಡಿ ನೋಂದಣಿ ಮಾಡಿಸುತ್ತಿದ್ದಾರೆ.

ನಗರದ ನಿಟುವಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಂಗ್ಲ ಮಾಧ್ಯಮಕ್ಕೆ ಬೇಡಿಕೆ ಹೆಚ್ಚಾಗಿದೆ.

ಈ ಶಾಲೆಯ ಆಂಗ್ಲ ಮಾಧ್ಯಮಕ್ಕೆ ತಮ್ಮ ಮಕ್ಕಳನ್ನು ಸೇರಿಸಲು ಬುಧವಾರ ಬೆಳಿಗ್ಗೆ 4 ಗಂಟೆಯಿಂದಲೇ ಪೋಷಕರು ಸರದಿ ಸಾಲಿನಲ್ಲಿ ನಿಂತಿದ್ದಾಗಿ ಶಿಕ್ಷಕರು ಹೇಳಿದ್ದಾರೆ.

1 ರಿಂದ 5ನೇ ತರಗತಿ ವರೆಗೆ 30 ಮಕ್ಕಳನ್ನು ಮಾತ್ರ ಆಂಗ್ಲ ಮಾಧ್ಯಮಕ್ಕೆ ನೋಂದಣಿ ಮಾಡಿಸಿಕೊಳ್ಳಲು ಸರ್ಕಾರಿ ಆದೇಶವಿದೆ. ಆದರೆ ಸುಮಾರು 150ಕ್ಕೂ ಹೆಚ್ಚು ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ದುಂಬಾಲು ಬಿದ್ದಿರುವುದು ಶಿಕ್ಷಕರಿಗೆ ತಲೆ ನೋವಾಗಿ ಪರಿಣಮಿಸಿದೆ.

ಪ್ರತಿಷ್ಠಿತ ಖಾಸಗಿ ಶಾಲೆಗಳ ಬಳಿಯೇ ಇರುವ ಈ ಸರ್ಕಾರಿ ಶಾಲೆ ಕಳೆದ ಹಲವು ವರ್ಷಗಳಿಂದ ಗುಣಮಟ್ಟದ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಖಾಸಗಿ ಶಾಲೆಯಲ್ಲಿ ಸಾವಿರಾರು ರೂಪಾಯಿ ಶುಲ್ಕ ಕಟ್ಟಲಾಗದ ಅನೇಕರು ಈ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇತರೆ ಸರ್ಕಾರಿ ಶಾಲೆಗಳಿಗಿಂತ ಇಲ್ಲಿ ಮಕ್ಕಳ ಸಂಖ್ಯೆ ಅಧಿಕವಾಗಿದೆ.

ಕಳೆದ ನಾಲ್ಕು ವರ್ಷಗಳಿಂದ ಒಂದನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮಕ್ಕೆ ಅನುಮತಿ ಸಿಕ್ಕಿತ್ತು. ಅಲ್ಲಿಂದ ಇಲ್ಲಿಯವರೆಗೂ ಬೇಡಿಕೆ ಹೆಚ್ಚಾಗಿದೆ. ಈ ವರ್ಷ ಬೇಡಿಕೆ ದುಪ್ಪಟ್ಟಾಗಿದೆ ಎನ್ನುತ್ತಾರೆ ಶಿಕ್ಷಕರು.

ಇಲ್ಲಿನ ಶಿಕ್ಷಕರು ನೋಂದಣಿ ಸಂಖ್ಯೆಯನ್ನು ಹೆಚ್ಚಿಸುವಂತೆ ಹಿರಿಯ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

## ದೇಶದ್ರೋಹ ಕಾಯ್ದೆ ಉಳಿಸಲು ಶಿಫಾರಸ್ಸು

ನವದೆಹಲಿ, ಜೂ. 1 – ದೇಶದ್ರೋಹಕ್ಕೆ ಸಂಬಂಧಿಸಿದ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124ಎ ಅನ್ನು ಉಳಿಸಿಕೊಳ್ಳಬೇಕಿದೆ. ಆದರೆ, ಈ ವಿಷಯದಲ್ಲಿ ಸ್ಪಷ್ಟತೆಗಾಗಿ ಕೆಲ ತಿದ್ದುಪಡಿಗಳನ್ನು ತರಬೇಕಿದೆ ಎಂದು ಕಾನೂನು ಆಯೋಗ ತಿಳಿಸಿದೆ.

ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಿರುವ ಆಯೋಗ, ಈ ಕಾಯ್ದೆಯ ದುರುಪಯೋಗ ತಡೆಗಾಗಿ ಮಾದರಿ ಮಾರ್ಗಸೂಚಿಗಳನ್ನು ರೂಪಿಸಬೇಕಿದೆ ಎಂದು ಶಿಫಾರಸ್ಸು ಮಾಡಿದೆ.

ದೇಶದ್ರೋಹ ಕಾಯ್ದೆ ವಸಹಾತುಶಾಹಿಯ ಪಳೆಯುಳಿಕೆ ಎಂದು ಹೇಳಿದ ಮಾತ್ರಕ್ಕೆ ಅದನ್ನು ವಾಪಸ್ ಪಡೆಯಲು ಆಧಾರವಾಗದು. ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ ಹಾಗೂ ರಾಷ್ಟ್ರೀಯ ಭದ್ರತಾ ಕಾಯ್ದೆಗಳೂ ಸಹ ದೇಶದ್ರೋಹದ ಕಾಯ್ದೆ ಜೊತೆ ಸಂಬಂಧ ಹೊಂದಿವೆ ಎಂದು ಆಯೋಗ ತಿಳಿಸಿದೆ.

ದೇಶದ್ರೋಹ ಕಾಯ್ದೆಯನ್ನು ರದ್ದುಗೊಳಿಸಿದರೆ ಸಂಬಂಧಿಸಿದ ಪ್ರಕರಣಗಳನ್ನು ವಿಶೇಷ ಕಾಯ್ದೆಗಳು ಹಾಗೂ ಉಗ್ರವಾದ ವಿರೋಧಿ ಕಾಯ್ದೆಗಳ ವ್ಯಾಪ್ತಿಗೆ ತರಬೇಕಾಗುತ್ತದೆ. ಈ ಕಾಯ್ದೆಗಳು ಇನ್ನಷ್ಟು ಕಠಿಣವಾಗಿವೆ ಎಂದೂ ತಿಳಿಸಲಾಗಿದೆ.

ದೇಶದ್ರೋಹ ಕಾಯ್ದೆಯ ಸಿಂಧುತ್ವದ ವಿಷಯ ಸುಪ್ರೀಂ ಕೋರ್ಟ್ ಎದುರಿದೆ. ಈ ಕಾಯ್ದೆಯನ್ನು ಪರಿಶೀಲಿಸುವುದಾಗಿ ಕೇಂದ್ರ ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ ದೇಶದ್ರೋಹಕ್ಕೆ ಸಂಬಂಧಿಸಿದಂತೆ ಯಾವುದೇ ಎಫ್.ಐ.ಆರ್. ದಾಖಲಿಸಬಾರದು ಹಾಗೂ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ತಿಳಿಸಿತ್ತು.

ಅಲ್ಲದೇ, ಈಗಾಗಲೇ ದಾಖಲಾಗಿರುವ ಪ್ರಕರಣಗಳ ವಿಚಾರಣೆ, ಹಾಗೂ ಪ್ರಕ್ರಿಯೆಗಳನ್ನು ತಡೆಯಬೇಕೆಂದೂ ನ್ಯಾಯಾಲಯ ತಿಳಿಸಿತ್ತು.

ಆದರೆ, ಈ ಕಾಯ್ದೆಯನ್ನು ಮುಂದುವರೆಸಲು ಆಯೋಗ ತನ್ನ ಶಿಫಾರಸ್ಸಿನಲ್ಲಿ ತಿಳಿಸಿದೆ. ಈ ಕಾಯ್ದೆಯು ವಸಾಹತುಶಾಹಿಯ ಕಾಲದ ಪಳೆಯುಳಿಕೆ ಎಂದು ಮಾಡಲಾಗುವ ಟೀಕೆಯನ್ನೂ ಆಯೋಗ ಪ್ರಸ್ತಾಪಿಸಿದೆ.

ದೇಶದ್ರೋಹ ಕಾಯ್ದೆಯನ್ನು ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ಬಳಸಿದ ಇತಿಹಾಸವಿದೆ. ಆದರೆ, ಇದೇ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದಾದರೆ, ಇಡೀ ಕಾನೂನು ವ್ಯವಸ್ಥೆಯೇ ವಸಾಹತು ಶಾಹಿಯ ಹಿನ್ನೆಲೆಯಿಂದ ಬಂದಿರುವುದಾಗಿದೆ. ಪೊಲೀಸ್ ಪಡೆಗಳು ಹಾಗೂ ಐ.ಎ.ಎಸ್. ವ್ಯವಸ್ಥೆಯೂ ಬ್ರಿಟಿಷರ ಕಾಲಾವಧಿಯಿಂದ ಬಂದವು ಎಂದು ಆಯೋಗ ಹೇಳಿದೆ.

ಯಾವುದೇ ಕಾಯ್ದೆಗೆ ವಸಾಹತುಶಾಹಿ ಎಂಬ ಹಣೆಪಟ್ಟಿ ಅಂಟಿಸಿದ ತಕ್ಷಣ ಅದು ಸವಕಲಾಗುವುದಿಲ್ಲ ಎಂದೂ ಆಯೋಗ ಹೇಳಿದೆ.

ದೇಶದ್ರೋಹ ಕಾಯ್ದೆಯ ದುರ್ಬಳಕೆಯ ಹಿನ್ನೆಲೆಯಲ್ಲಿ ಅದನ್ನು ವಾಪಸ್ ಪಡೆಯಬೇಕು ಎಂಬ ವಾದವನ್ನೂ ಆಯೋಗ ತಳ್ಳಿ ಹಾಕಿದೆ.

ಕಾಯ್ದೆಗಳ ದುರುಪಯೋಗದ ಹಲವಾರು ಉದಾಹರಣೆಗಳಿವೆ. ದುರುದ್ದೇಶ ಹೊಂದಿದ ವ್ಯಕ್ತಿಗಳು ಹಲವಾರು ಕಾಯ್ದೆಗಳನ್ನು ವೈಯಕ್ತಿಕ ದ್ವೇಷ ಹಾಗೂ ಸ್ವಹಿತಾಸಕ್ತಿಗೆ (2ನೇ ಪುಟಕ್ಕೆ)

## ಎನ್.ಸಿ.ಇ.ಆರ್.ಟಿ. ಪಠ್ಯದಿಂದ ಆವರ್ತಕ ಕೋಷ್ಟಕ ಹೊರಕ್ಕೆ

ನವದೆಹಲಿ, ಜೂ. 1 – ಎನ್.ಸಿ.ಇ.ಆರ್.ಟಿ. 10ನೇ ತರಗತಿ ಪಠ್ಯದಿಂದ ಆವರ್ತಕ ಕೋಷ್ಟಕ, ರಾಷ್ಟ್ರದ ಆರ್ಥಿಕತೆಗೆ ಕೃಷಿಯ ಕೊಡುಗೆ, ಪ್ರಜಾಪ್ರಭುತ್ವದ ಸವಾಲುಗಳು ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ ಪಾಠಗಳನ್ನು ತೆಗೆದು ಹಾಕಲಾಗಿದೆ.

ಎನ್.ಸಿ.ಇ.ಆರ್.ಟಿ. ಕಳೆದ ವರ್ಷ ಪಠ್ಯ ಪರಿಷ್ಕರಣೆ ಅಂಗವಾಗಿ ಈ ವಿಷಯಗಳನ್ನು ಕೈ ಬಿಡುವುದಾಗಿ ತಿಳಿಸಿತ್ತು. ಈಗ ಹೊಸ ಪಠ್ಯಗಳನ್ನು ಬಿಡುಗಡೆ ಮಾಡಲಾಗಿದ್ದು, ಬದಲಾವಣೆಗಳನ್ನು ಜಾರಿಗೆ ತರಲಾಗಿದೆ. 10ನೇ ತರಗತಿಯ ರಸಾಯನಶಾಸ್ತ್ರ ಪಠ್ಯದಿಂದ ಆವರ್ತಕ ಕೋಷ್ಟಕ ಸಂಪೂರ್ಣ ಕೈ ಬಿಡಲಾಗಿದೆ. ಆದರೆ, 11ನೇ ತರಗತಿಯ ಪಠ್ಯದಲ್ಲಿ ಈ ವಿಷಯ ಇದೆ.

ಕೊರೊನಾ ಹಿನ್ನೆಲೆಯಲ್ಲಿ ಎನ್.ಸಿ.ಇ.ಆರ್.ಟಿ. ಪಠ್ಯದ ಹೊರೆ ಕಡಿಮೆ ಮಾಡಲು ನಿರ್ಧರಿಸಿತ್ತು. ಅಲ್ಲದೇ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿಯೂ ಪಠ್ಯದ ಹೊರೆ ಕಡಿಮೆ ಮಾಡಲಾಗುತ್ತಿದೆ.

10ನೇ ತರಗತಿಯ ವಿಜ್ಞಾನ ಪಠ್ಯದಲ್ಲಿದ್ದ ಜೀವ ವಿಕಾಸ, 6,7, ಹಾಗೂ 8ನೇ ತರಗತಿಗಳಲ್ಲಿದ್ದ ನಾರು ಮತ್ತು ಬಟ್ಟೆಗಳ ಪಾಠ ಮತ್ತು 9ನೇ ತರಗತಿಯಲ್ಲಿ ನಾವೇಕೆ ರೋಗ ಪೀಡಿತರಾಗುತ್ತೇವೆ ಎಂಬ ವಿಷಯದ ಪಾಠಗಳನ್ನು ತೆಗೆದು ಹಾಕಲಾಗಿದೆ.

## ಭಾರತದ ಉತ್ಪಾದನಾ ವಲಯ 31 ತಿಂಗಳಲ್ಲೇ ಅತಿ ಹೆಚ್ಚು

ನವದೆಹಲಿ, ಮೇ 1 - ಭಾರತದ ಉತ್ಪಾದನಾ ವಲಯ ಮತ್ತಷ್ಟು ಪ್ರಗತಿ ಕಂಡಿದ್ದು, ಮೇ ತಿಂಗಳಲ್ಲಿ 31 ತಿಂಗಳಲ್ಲೇ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದೆ. ಹೊಸ ಆದೇಶಗಳು ಹಾಗೂ ಮಾರುಕಟ್ಟೆ ಪರಿಸ್ಥಿತಿ ಕಾರಣದಿಂದ ಈ ಬೆಳವಣಿಗೆಯಾಗಿದೆ. ಇದರಿಂದಾಗಿ ಹೆಚ್ಚು ಉದ್ಯೋಗಾವಕಾಶಗಳೂ ಸೃಷ್ಟಿಯಾಗಿವೆ ಎಂದು ಮಾಸಿಕ ಸಮೀಕ್ಷೆಯೊಂದು ತಿಳಿಸಿದೆ.

ಎಸ್ ಅಂಡ್ ಪಿ ಗ್ಲೋಬಲ್ ಇಂಡಿಯಾ ಪಿ.ಎಂ.ಐ. ಸೂಚ್ಯಂಕದ ಪ್ರಕಾರ, ಮೇ ತಿಂಗಳಲ್ಲಿ ಬೆಳವಣಿಗೆ ಸೂಚ್ಯಂಕ ಶೇ.58.7ರಷ್ಟಿದೆ. ಇದು ಏಪ್ರಿಲ್ ತಿಂಗಳಲ್ಲಿ ಶೇ.57.2ರಷ್ಟಿತ್ತು. ಅಕ್ಟೋಬರ್ 2020ರ ನಂತರ ಇದು ಅತಿ ಹೆಚ್ಚಿನ ಬೆಳವಣಿಗೆಯಾಗಿದೆ.

ಕಳೆದ ಆರು ತಿಂಗಳಲ್ಲಿ ಕಂಪನಿಗಳು ಅತಿ ಹೆಚ್ಚಿನ ವೇಗದಲ್ಲಿ ಅಂತರರಾಷ್ಟ್ರೀಯ ಮಾರಾಟ ಪಡೆದುಕೊಂಡಿವೆ ಎಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

## 2,000 ರೂ. ನೋಟು ತ್ವರಿತ ವಿಚಾರಣೆಗೆ ಸುಪ್ರೀಂ ನಕಾರ

ನವದೆಹಲಿ, ಜೂ. 1 – 2,000 ರೂ.ಗಳ ನೋಟುಗಳ ವಿನಿಮಯಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಅರ್ಜಿಯ ತ್ವರಿತ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಯಾವುದೇ ಗುರುತಿನ ಚೀಟಿ ಇಲ್ಲದೆಯೇ ನೋಟುಗಳ ವಿನಿಮಯಕ್ಕೆ ಅವಕಾಶ ಮಾಡಿಕೊಟ್ಟಿರುವುದನ್ನು ವಾಪಸ್ ಪಡೆಯಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

ವಕೀಲ ಅಶ್ವಿನಿ ಉಪಾಧ್ಯಾಯ್ ಅವರು ತ್ವರಿತ ವಿಚಾರಣೆಗೆ ಮನವಿ ಸಲ್ಲಿಸಿದ್ದರು. ಆದರೆ, (2ನೇ ಪುಟಕ್ಕೆ)

## ಅಗ್ನಿ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ, ಜೂ. 1 – ಅಗ್ನಿ-1 ಕ್ಷಿಪಣಿಯ ಪರೀಕ್ಷೆ ಯಶಸ್ವಿಯಾಗಿದೆ. ಇದರೊಂದಿಗೆ ಕ್ಷಿಪಣಿಯು ಎಲ್ಲಾ ಕಾರ್ಯನಿರ್ವಹಣೆ ಹಾಗೂ ತಾಂತ್ರಿಕ ಮಾನದಂಡಗಳಲ್ಲಿ ಸಿದ್ಧವಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಒಡಿಶಾದ ಅಬ್ದುಲ್ ಕಲಾಂ ದ್ವೀಪದಲ್ಲಿ ಪರೀಕ್ಷೆ ನಡೆಸಲಾಗಿದೆ. ಅತ್ಯಂತ ನಿಖರವಾಗಿ ಗುರಿ ಭೇದಿಸುವ ಸಾಮರ್ಥ್ಯ ಹೊಂದಿರುವುದು ಸಾಬೀತಾಗಿದೆ ಎಂದು ಸಚಿವಾಲಯ ಹೇಳಿದೆ.

## ನಾಳೆ ನಗರಕ್ಕೆ ಸಚಿವ ಎಸ್ಸೆಸ್ಸೆಂ

### ಬೃಹತ್ ಮೆರವಣಿಗೆ, ಬೈಕ್ ರ್‍ಯಾಲಿ: ಹೆಚ್.ಬಿ. ಮಂಜಪ್ಪ



ದಾವಣಗೆರೆ, ಜೂ.1- ಗಣಿ ಮತ್ತು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು 3ನೇ ಬಾರಿಗೆ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ನಾಡಿದ್ದು ದಿನಾಂಕ 3 ರ ಶನಿವಾರ ನಗರಕ್ಕೆ ಆಗಮಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ತಿಳಿಸಿದ್ದಾರೆ.

ಅಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಪಂಚಾಯತ್ ಮುಂಭಾಗದಲ್ಲಿ ಅವರನ್ನು ಸ್ವಾಗತಿಸಿ, ಬೈಕ್ ರ್‍ಯಾಲಿ ಮೂಲಕ ನಗರದ ವಿವಿಧ ಕಡೆಗಳಲ್ಲಿ ಮೆರವಣಿಗೆ ನಡೆಸಲಾಗುವುದು.

ಈ ಮೆರವಣಿಗೆಯೂ ಜಿಲ್ಲಾ ಪಂಚಾಯತ್ ಮುಂಭಾಗ ಪ್ರಾರಂಭವಾಗಿ ಗಣೇಶ ದೇವಸ್ಥಾನ, ಹದಡಿ ರಸ್ತೆ, ಐ.ಟಿ.ಐ. ಕಾಲೇಜ್ ಮುಂಭಾಗದಿಂದ 60 ಅಡಿ ರಸ್ತೆಯ ಮುಖಾಂತರ ನಿಟುವಳ್ಳಿ ದುರ್ಗಾಂಬಿಕಾ ಸರ್ಕಲ್, ನಿಟುವಳ್ಳಿ ಆರ್.ಎಸ್. ಶೇಖರಪ್ಪನವರ ಮನೆ ಮುಂಭಾಗ, ಕೊಂಡಜ್ಜಿ ಬಸಪ್ಪ ಸರ್ಕಲ್ ಹದಡಿ ರಸ್ತೆ, ವಿದ್ಯಾರ್ಥಿ ಭವನ ಸರ್ಕಲ್, ಹದಡಿ ರಸ್ತೆ, ಕೆ.ಇ.ಬಿ. ಸರ್ಕಲ್, (ಅಂಬೇಡ್ಕರ್ ಸರ್ಕಲ್) ಹದಡಿ ರಸ್ತೆ, ಜಯದೇವ ಸರ್ಕಲ್, ಮಹಾನಗರ ಪಾಲಿಕೆ ಕಛೇರಿ ಮುಂಭಾಗದಿಂದ ಅರುಣ ಸರ್ಕಲ್ ಮುಖಾಂತರ ರೈಲ್ವೆಗೇಟ್ ಮುಖಾಂತರ ಹೊಂಡದ ಸರ್ಕಲ್, ದುರ್ಗಾಂಬಿಕ ದೇವಸ್ಥಾನ ಶಿವಾಜಿ ವೃತ್ತ, ಹಗೇದಿಬ್ಬ ಸರ್ಕಲ್, ಆಜಾದ್‌ನಗರ ಮುಖ್ಯರಸ್ತೆ, ಅರಳಿಮರ ಸರ್ಕಲ್, ವೆಂಕಟೇಶ್ವರ ಸರ್ಕಲ್‌ಗೆ ಮುಕ್ತಾಯವಾಗಲಿದೆ.

ಈ ಮೆರವಣಿಗೆಯಲ್ಲಿ ಶಾಸಕರುಗಳಾದ ದಕ್ಷಿಣದ ಶಾಮನೂರು ಶಿವಶಂಕರಪ್ಪ, ಮಾಯಕೊಂಡದ ಕೆ. ಎಸ್.ಬಸವಂತಪ್ಪ, ಚನ್ನಗಿರಿಯ ಶಿವಗಂಗಾ ಬಸವರಾಜ್, ಹೊನ್ನಾಳಿಯ ಡಿ.ಜಿ.ಶಾಂತನಗೌಡ, ಜಗಳೂರಿನ ದೇವೇಂದ್ರಪ್ಪ, ಹರಪನಹಳ್ಳಿಯ ಶ್ರೀಮತಿ ಲತಾ ಮಲ್ಲಿಕಾರ್ಜುನ್, ಮಾಜಿ ಶಾಸಕ ಎಸ್.ರಾಮಪ್ಪ, ಹರಿಹರದ ನಂದಿಗಾವಿ ಶ್ರೀನಿವಾಸ್, ಅರಸೀಕೆರೆ ಕೊಟ್ರೇಶ್ ಭಾಗವಹಿಸುವರು.

## ಮೇ ತಿಂಗಳಲ್ಲಿ 1.57 ಲಕ್ಷ ಕೋಟಿ ರೂ. ಜಿಎಸ್ಟಿ

ನವದೆಹಲಿ, ಜೂ. 1- ಮೇ ತಿಂಗಳಲ್ಲಿ 1.57 ಲಕ್ಷ ಕೋಟಿ ರೂ.ಗಳ ಜಿ.ಎಸ್.ಟಿ. ತೆರಿಗೆ ಸಂಗ್ರಹವಾಗಿದೆ. ಸತತ ಮೂರು ತಿಂಗಳಿನಿಂದ ತೆರಿಗೆ ಸಂಗ್ರಹ 1.50 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚಿನ ಪ್ರಮಾಣದಲ್ಲಿದೆ.

ಕಳೆದ ವರ್ಷದಿಂದ ಎಲ್ಲಾ ರಾಜ್ಯಗಳಲ್ಲಿ ಉತ್ತಮ ಆರ್ಥಿಕ ಸಾಧನೆಯಾಗುತ್ತಿರುವುದರಿಂದ ತೆರಿಗೆ ಸಂಗ್ರಹ ಹೆಚ್ಚಾಗಿದೆ ಎಂದು ತೆರಿಗೆ ಪರಿಣಿತರು ತಿಳಿಸಿದ್ದಾರೆ.

ಮೇ ತಿಂಗಳಲ್ಲಿ ಒಟ್ಟು 1,57,090 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿದೆ. ಸೆಂಟ್ರಲ್ ಜಿ.ಎಸ್.ಟಿ. ಪಾಲು 28,411 ಕೋಟಿ ರೂ., ರಾಜ್ಯ ಜಿ.ಎಸ್.ಟಿ. ಪಾಲು 35,828 ಕೋಟಿ ರೂ. ಐ.ಜಿ.ಎಸ್.ಟಿ. 81,363 ಕೋಟಿ ರೂ. ಹಾಗೂ ಸೆಸ್ 11,489 ಕೋಟಿ ರೂ. ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ 2023ರ ಮೇ ತಿಂಗಳಲ್ಲಿ ಜಿ.ಎಸ್.ಟಿ. ಆದಾಯ ಶೇ.12ರಷ್ಟು ಹೆಚ್ಚಾಗಿದೆ. ಈ ವರ್ಷ ಏಪ್ರಿಲ್ ತಿಂಗಳಲ್ಲಿ 1.87 ಲಕ್ಷ ಕೋಟಿ ರೂ. ಹಾಗೂ ಮಾರ್ಚ್ ತಿಂಗಳಲ್ಲಿ 1.60 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು.

ಸತತ 14 ತಿಂಗಳುಗಳಿಂದ ಜಿ.ಎಸ್.ಟಿ. ಸಂಗ್ರಹ ತಿಂಗಳಿಗೆ 1.4 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚಾಗಿದೆ. ಜಿ.ಎಸ್.ಟಿ. ಜಾರಿಗೆ ಬಂದ 2017ರ ನಂತರ ಐದನೇ ಬಾರಿ ಜಿ.ಎಸ್.ಟಿ. 1.5 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚಾಗಿದೆ. ಈ ವರ್ಷ ಸರ್ಕಾರ ಅಂದಾಜಿಸಿರುವ ಪ್ರಮಾಣದಲ್ಲೇ ಜಿ.ಎಸ್.ಟಿ. ಸಂಗ್ರಹವಾಗುತ್ತಿದೆ. ಬರುವ ಸೆಪ್ಟೆಂಬರ್ ವೇಳೆಗೆ ಜಿ.ಎಸ್. (2ನೇ ಪುಟಕ್ಕೆ)

## ಅಡಿಕೆ ಬೆಳೆಯಿಂದ ದೂರ ಇರಲು ಸಲಹೆ



### ತಾಪಂ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಪ್ರಕಾಶ ಕೋಳಿವಾಡ ಮನವಿ

ರಾಣೇಬೆನ್ನೂರು, ಮೇ 31- ಅಡಿಕೆ ಮಾರುಕಟ್ಟೆ ಕುಸಿದರೆ ರೈತ ಬಹಳಷ್ಟು ನೋವು ಅನುಭವಿಸುವಂತಾಗುತ್ತದೆ. ಹಿಂದೊಮ್ಮೆ ರೈತರು ಅಡಿಕೆ ಮಾರುಕಟ್ಟೆ ಕುಸಿದಿದ್ದರಿಂದ ತೀವ್ರವಾದ ಸಂಕಷ್ಟಕ್ಕೆ ಸಿಲುಕಿದ್ದರು. ಕಾರಣ ಬಯಲುಸೀಮೆಯ ರೈತರು ಈ ದಿಶೆಯಲ್ಲಿ ಚಿಂತನೆ ಮಾಡಿ ಅಡಿಕೆ ಬೆಳೆಯತ್ತ ವಾಲಬೇಕು ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಇಂದು ತಾಪಂ ಸಭಾಭವನದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೋಟಗಾರಿಕೆ ಅಧಿಕಾರಿ ನೂರ್‌ಆಹ್ಮದ್ ಹಲಗೇರಿ ಅವರು ತಾಲ್ಲೂಕಿನಲ್ಲಿ 8 ಸಾವಿರ ಎಕರೆ ಅಡಿಕೆ ಬೆಳೆ ಇದೆ ಎಂದಾಗ, ಶಾಸಕರು ಮೇಲಿನಂತೆ ಅಭಿಪ್ರಾಯಿಸಿದರು.

ಕಾರ್ಮಿಕರ ಸಮಸ್ಯೆಯಿಂದಾಗಿ ರೈತರು, ಕೂಲಿಕಾರರ ಅವಲಂಬಿತ ಬೆಳೆಗಳ ಬದಲು ಅಡಿಕೆ ಬೆಳೆಯುತ್ತಿದ್ದು. ಇದು ಮುಂದಿನ ದಿನಗಳಲ್ಲಿ ಸಂಕಷ್ಟ ತರಬಹುದು ಎಂಬುದನ್ನು ರೈತರ ಮನದಾಳಕ್ಕೆ ತಲುಪುವಂತೆ ತಿಳಿಹೇಳಿ ಇತರೆ ಬೆಳೆಯತ್ತ ರೈತರ ಗಮನ ಸೆಳೆಯುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಎಂದು ಶಾಸಕರು ಹೇಳಿದರು.

ಪ್ರತಿವರ್ಷ ಅವಶ್ಯವಿರುವ ಗೊಬ್ಬರವನ್ನು ಸರಬರಾಜು ಮಾಡುವಲ್ಲಿ ವಿಳಂಬ ಮಾಡಿದರೆ ಗುತ್ತಿಗೆದಾರರ ಮೇಲೆ ಯಾವುದೇ ಕ್ರಮ ಜರುಗಿಸದಿರುವುದು ಸರಿ ಅಲ್ಲ, ರೈತ ಅನುಭವಿಸುವ ನೋವು ಗುತ್ತಿಗೆದಾರನಿಗೂ ಗೊತ್ತಾಗಬೇಕು. ಅವನು ಕಾನೂನು ವ್ಯಾಪ್ತಿಯಲ್ಲಿ ತೊಂದರೆ ಅನುಭವಿಸಿದಾಗ ರೈತರ ಕಷ್ಟದ ಅರಿವಾಗುತ್ತದೆ. ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಗಮನ ಸೆಳೆಯುವುದಾಗಿ ಕೃಷಿ ಇಲಾಖೆ ಅಧಿಕಾರಿ ಹಿತೇಂದ್ರ, ಗೌಡಪ್ಪಳವರ ಇಲಾಖೆಯ ಪ್ರಗತಿ ಓದಿದಾಗ ಶಾಸಕರು ಪ್ರಸ್ತಾಪಿಸಿದರು.

ದ್ವಿಪಥದ ಹಲಗೇರಿ ರಸ್ತೆಯಲ್ಲಿ ಒಳಚರಂಡಿಯ ಮ್ಯಾನ್ ಹೋಲ್ ಗಳ ಅಳವಡಿಕೆಯಿಂದ ದ್ವಿಚಕ್ರ ವಾಹನ ಸವಾರರು ಅನುಭವಿಸುತ್ತಿರುವ ಅವಘಡಗಳ ಬಗ್ಗೆ ಪ್ರಸ್ತಾಪಿಸಿದ ಶಾಸಕರು, ನಗರಸಭೆ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಸಾಮರಸ್ಯ ಇಲ್ಲದ್ದರಿಂದ ಸಾರ್ವಜನಿಕರು ತೊಂದರೆಪಡುವಂತಾಗಿದ್ದು, ಜನಕಲ್ಯಾಣದ ಈ ಕಾರ್ಯಕ್ರಮಗಳಿಗೆ ಎಲ್ಲ ಇಲಾಖೆಯವರು ಪರಸ್ಪರ ಸ್ಪಂದಿಸಬೇಕು ಎಂದು ಶಾಸಕರು ಸೂಚಿಸಿದರು.

ಜನಸಂಖ್ಯೆ ಕಡಿಮೆ ಇರುವಲ್ಲಿ 24×7 ಕಾರ್ಯ ನಿರ್ವಹಿಸುವ ಆಸ್ಪತ್ರೆಗಳನ್ನು ಹೆಚ್ಚು ಮಾಡಿ, (2ನೇ ಪುಟಕ್ಕೆ)

## ತೆಲಂಗಾಣದಲ್ಲಿ ಮೊದಲ 3ಡಿ ಮುದ್ರಿತ ದೇವಾಲಯ

ಹೈದರಾಬಾದ್, ಜೂ. 1 – ತೆಲಂಗಾಣದ ಸಿದ್ದಿಪೇಟ್‌ನಲ್ಲಿ ವಿಶ್ವದ ಮೊಟ್ಟ ಮೊದಲ 3ಡಿ ಮುದ್ರಿತ ದೇವಾಲಯ ಸ್ಥಾಪನೆಯಾಗಲಿದೆ. ನಗರದ ಅಪ್ಸುಜಾ ಇನ್ಫ್ರಾಟೆಕ್ 3,800 ಚದುರ ಅಡಿ ಪ್ರದೇಶದಲ್ಲಿ ಈ ದೇವಾಲಯ ನಿರ್ಮಾಣ ಮಾಡಲಿದೆ.

ಗಣೇಶ, ಶಿವ ಹಾಗೂ ಪಾರ್ವತಿ ದೇವರಿಗೆ ಮೂರು ಗರ್ಭಗೃಹ ಇರುವಂತಹ ದೇವಾಲಯ ನಿರ್ಮಾಣ ಮಾಡಲಾಗುವುದು ಎಂದು ಅಪ್ಸುಜಾ ಇನ್ಫ್ರಾಟೆಕ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹರಿ ಕೃಷ್ಣ ಜೀಡಿಪಲ್ಲಿ ತಿಳಿಸಿದ್ದಾರೆ.

## ಜಗಳೂರು ಕ್ಷೇತ್ರದಲ್ಲಿ ಕಸಗುಡಿಸಿ ಅಭಿವೃದ್ಧಿ ಘಂಟೆ ಭಾರಿಸುವೆ

### ಜಗಳೂರು: ಶಾಲಾ ಹಾಜರಿ ಪುಸ್ತಕಕ್ಕೆ ಸಹಿ ಹಾಕಿ, ಘಂಟೆ ಭಾರಿಸಿ, ಕಸ ಗುಡಿಸಿದ ಶಾಸಕ ದೇವೇಂದ್ರಪ್ಪ

ಜಗಳೂರು, ಜೂ.1- ಯಾರೊಬ್ಬರಿಗೂ ತಾರತಮ್ಯವಿಲ್ಲದೆ ಸಮಸ್ತ ಮತದಾರರಿಗೆ ನ್ಯಾಯ ಒದಗಿಸುತ್ತಾ ಕ್ಷೇತ್ರದಲ್ಲಿ ಕಸಗುಡಿಸಿ ಅಭಿವೃದ್ಧಿ ಘಂಟೆ ಭಾರಿಸುವೆ. ಕ್ಷೇತ್ರವನ್ನು ರಾಮರಾಜ್ಯವನ್ನಾಗಿಸುವ ಪರಿಕಲ್ಪನೆ ನನ್ನದು ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಶಾಸಕರು, ತಾವು ಜವಾನನಾಗಿ ಸೇವೆ ಮಾಡಿ ನಿವೃತ್ತಿ ಹೊಂದಿದ ಪಟ್ಟಣದ ಅಮರಭಾರತಿ ವಿದ್ಯಾಕೇಂದ್ರದ ಆವರಣದಲ್ಲಿ ಗುರುವಾರ 'ಸಾಂಕೇತಿಕವಾಗಿ' ಶಾಲಾ ಘಂಟೆ ಬಾರಿಸಿ, ಕಸಗುಡಿಸಿ ನಂತರ ಅವರು ಮಾತನಾಡಿದರು.

ವಿದ್ಯಾರತ್ನ ದಿ.ಟಿ.ತಿಪ್ಪೇಸ್ವಾಮಿ ಅವರು ಬಡತನದಲ್ಲಿ ಜನಿಸಿದ ನನಗೆ 'ಡಿ' ಗ್ರೂಪ್ ನೌಕರಿ ಒದಗಿಸಿದರು. ಅಂದು 380 ರೂ ವೇತನದೊಂದಿಗೆ ವೈಯಕ್ತಿಕ ಜೀವನ ನೀಡಿದರು. ಅಲ್ಲದೆ ನನ್ನ ಮಕ್ಕಳಿಗೆ ಅಮರಭಾರತಿ ವಿದ್ಯಾಕೇಂದ್ರದಲ್ಲಿ ಉಚಿತ ಶಿಕ್ಷಣದ ಭಿಕ್ಷೆಯಿಂದ ನನ್ನ ಮಗ ಐಎಎಸ್ ಉತ್ತೀರ್ಣನಾದ ಫಲವಾಗಿ ನಾನು ಶಾಸಕನಾಗಿದ್ದೇನೆ ಎಂದು ಹೇಳಿದರು.

ವಿದ್ಯಾರತ್ನ ದಿವಂಗತ ಟಿ.ತಿಪ್ಪೇಸ್ವಾಮಿ ಅವರು ನನಗೆ ಜೀವನ ನೀಡಿದ್ದನ್ನು ಮರೆತರೆ ನಿಜಕ್ಕೂ ಆತ್ಮವಂಚನೆ ಮಾಡಿಕೊಂಡಂತೆ. ಅವರು ದೈವಸ್ವರೂಪ ಎಂದು ದೇವೇಂದ್ರಪ್ಪ ಸ್ಮರಿಸಿ ಭಾವುಕರಾದರು.



**ಅಭಿವೃದ್ಧಿಯೇ ನನ್ನ ಮಂತ್ರ:** ಅಪಘಾತದಲ್ಲಿ ಮರುಜೀವ ಪಡೆದು, ದೈವ ಕೃಪೆಯಿಂದ ಶಾಸಕನಾಗಿದ್ದೇನೆ. ಕ್ಷೇತ್ರದ ಸಮಗ್ರವಾದ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇನೆ ಎಂದು ಶಾಸಕರು ಹೇಳಿದರು.

**ನನ್ನ ವಿರುದ್ಧದ ಷಡ್ಯಂತರ ಮಣ್ಣುಪಾಲು:** ನನ್ನನ್ನು ಚುನಾವಣೆಯಲ್ಲಿ ರೌಡಿಯನ್ನಾಗಿ ಬಿಂಬಿಸಿ ಸೋಲಿಸಲು ಷಡ್ಯಂತರ ನಡೆಸಿದರು. ಸತ್ಯದ ಮುಂದೆ ಸೋತು ಮಣ್ಣುಮುಕ್ಕಿದರು. ನನ್ನ ಆಡಳಿತಾವಧಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಸಕಾಲದಲ್ಲಿ ಕೈಗೊಂಡು, ಸಿರಿಗೆರೆ ಸ್ವಾಮೀಜಿಗಳ ಮಾರ್ಗದಲ್ಲಿ ಸಮಯಕ್ಕೆ ಮಹತ್ವ ನೀಡುವೆ ಎಂದು ತಿಳಿಸಿದರು.

ಅಮರಭಾರತಿ ವಿದ್ಯಾಕೇಂದ್ರದ ಕಾರ್ಯದರ್ಶಿ ಟಿ.ಮಧು ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ಕೆಳದರ್ಜೆ ನೌಕರನಾಗಿ ನಿವೃತ್ತಿ ಹೊಂದಿದ ಒಬ್ಬ ಸಾಮಾನ್ಯ ವ್ಯಕ್ತಿ ಮಗನನ್ನು ಉನ್ನತ ಅಧಿಕಾರಿಯಾಗಿಸಿರುವುದಲ್ಲದೆ ತಾವೊಬ್ಬ ಶಾಸಕನಾಗಿ ಆಯ್ಕೆಯಾಗಿ ನಮ್ಮ ಸಂಸ್ಥೆ ಅಂಗಳಕ್ಕೆ ಆಗಮಿಸಿರುವುದು ಹೆಮ್ಮೆಯ ಸಂಗತಿ ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸಂತೋಷ್ ಕುಮಾರ್, ಮುಖಂಡರಾದ ಕಲ್ಲೇಶ್ ರಾಜ್ ಪಟೇಲ್, ಕೆಚ್ಚೇನಹಳ್ಳಿ ಶಿವಣ್ಣ, ಸಿ.ತಿಪ್ಪೇಸ್ವಾಮಿ, ಎನ್.ಟಿ. ಎರ್ರಿಸ್ವಾಮಿ, ಸುಭಾಷ್ ಚಂದ್ರ ಬೋಸ್, ಕೆ.ಪಿ.ಪಾಲಯ್ಯ, ಸಿ. ಲಕ್ಷ್ಮಣ್, ಕೃಷ್ಣಪ್ಪ, ಮಹೇಶ್, ಪ್ರಭಾಕರ್ ಲಕ್ಕೋಳ್, ಶ್ವೇತಾ ಮಧು, ಲುಕ್ಮಾನ್ ಖಾನ್, ಶಕೀಲ್ ಅಹಮ್ಮದ್, ಷಂಷುದ್ದೀನ್, ಪಲ್ಲಾಗಟ್ಟೆ ಶೇಖರಪ್ಪ, ಅಹಮ್ಮದ್ ಅಲಿ ಇದ್ದರು.

## ಸ್ವಾಸ್ಥ್ಯ ಕದಡುವ ಸಂಘಟನೆಗಳ ವಿರುದ್ಧ ಕ್ರಮ : ಪರಮೇಶ್ವರ್



ಬೆಂಗಳೂರು, ಜೂ.1 - ಪೊಲೀಸ್ ಇಲಾಖೆಯು ಶಿಸ್ತಿನ ಇಲಾಖೆಯಾಗಿದ್ದು, ಇದರಲ್ಲಿ ಒಳ್ಳೆಯದಿದ್ದರೆ ಸೆಲ್ಯೂಟ್ ಸಿಗಲಿದೆ. ಒಳ್ಳೆಯದಲ್ಲದಿದ್ದರೆ ಒದೆಯೂ ಸಿಗುತ್ತದೆ. ಮುಂದುವರೆದು ಗುಂಡು ಹಾರಿಸುವುದು ಇರುತ್ತದೆ. ಇವುಗಳಲ್ಲಿ ಯಾರಿಗೆ ಯಾವುದು ಬೇಕಿದೆಯೋ ತೀರ್ಮಾನ ಮಾಡಿ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಾಟಿ ಏಟು ತಿನ್ನಬೇಕೋ? ಇಲ್ಲವೆ ಗುಂಡು ಹಾರಿಸಿಕೊಳ್ಳಬೇಕೋ ಅಥವಾ ಶಾಂತಿಯಿಂದ ರಾಜ್ಯ ಇರಬೇಕೋ ಎಂಬುದನ್ನು ನಾಡಿನ ಜನರೇ ತೀರ್ಮಾನಿಸಿ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಯಾರು ಶಾಂತಿ ಕದಡುತ್ತಾರೋ, ಸಮಾಜದ ಸ್ವಾಸ್ಥ್ಯವನ್ನು ಕದಡುತಾರೋ ಅಂತಹ ಸಂಘಟನೆ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದೇವೆ. ಅವರು ಯಾರೂ ಅದನ್ನು ಮಾಡುವುದಿಲ್ಲವೆಂದರೆ ಭಯಪಡುವ ಅಗತ್ಯ ಇಲ್ಲ. ಅಂತಹುದನ್ನು ಮಾಡುವುದಾದರೆ, ಅವರಿಗೆ ಭಯ ಆಗುತ್ತದೆ ಎಂದು ಹೇಳಿದರು.

ನಾಗರಿಕ ಸಮುದಾಯ ಹಾಗೂ ಸಂಘಟನೆಗಳಿಗೆ ನಾನು ಮನವಿ ಮಾಡುವುದು ಇಷ್ಟೇ. ನಮ್ಮದು ಕುವೆಂಪು ಅವರು ಹೇಳಿದಂತೆ ಸರ್ವಜನಾಂಗದ ಶಾಂತಿಯ ತೋಟ ಮಾಡುತ್ತೇವೆ. ಜನರು ಪಕ್ಷಾತೀತವಾಗಿ, ಜಾತ್ಯತೀತವಾಗಿ ಸಹಕಾರ ಕೊಡಬೇಕು ಎಂದರು.

ಯಾವುದೇ ಕಾರಣಕ್ಕೂ ನೈತಿಕ ಪೊಲೀಸ್ ಗಿರಿ ಹಾಗೂ ಮತೀಯ ಘಟನೆಗಳನ್ನು ಸಹಿಸುವುದಿಲ್ಲ. ಅದನ್ನು (2ನೇ ಪುಟಕ್ಕೆ)

# ಜುಲೈ ವೇಳೆಗೆ ಫಾಕ್ಸ್‌ಕಾನ್ ಕಂಪನಿಗೆ ಜಮೀನು ಹಸ್ತಾಂತರ

**13,600 ಕೋಟಿ ರೂ. ಹೂಡಿಕೆಯ ಯೋಜನೆ**

ಬೆಂಗಳೂರು, ಜೂ.1 - ಮುಂಚೂಣಿ ಐಫೋನ್ ತಯಾರಿಕಾ ಕಂಪನಿ ಫಾಕ್ಸ್ ಕಾನ್ 2024ರ ಏಪ್ರಿಲ್ 1ರ ವೇಳೆಗೆ ದೇವನಹಳ್ಳಿ ಘಟಕದಲ್ಲಿ ಉತ್ಪಾದನೆ ಆರಂಭಿಸುವ ಗುರಿ ಹೊಂದಿದ್ದು, ಇದಕ್ಕೆ ಪೂರಕವಾಗಿ ಜುಲೈ 1ರ ಹೊತ್ತಿಗೆ ಪೂರ್ತಿಯಾಗಿ ಭೂಮಿ ಹಸ್ತಾಂತರಿಸುವುದಾಗಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ಹೇಳಿದರು.

ಜಾರ್ಜ್ ಚು ಅವರ ನೇತೃತ್ವದಲ್ಲಿ ಫಾಕ್ಸ್ ಕಾನ್ ಕಂಪನಿಯ ಉನ್ನತ ಅಧಿಕಾರಿಗಳ ತಂಡವು ಸೌಜನ್ಯದ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನೇತೃತ್ವದ ಹೊಸ ಸರ್ಕಾರವು 50,000 ಜನರಿಗೆ ಉದ್ಯೋಗ ಒದಗಿಸುವ 13,600 ಕೋಟಿ ರೂಪಾಯಿ ಮೊತ್ತದ ಈ ಯೋಜನೆ ಜಾರಿಗೆ ವೇಗ ನೀಡಿದಂತಾಗಿದೆ ಎಂದರು.

ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ (ಐಟಿಐಆರ್) ಕಾರ್ಯಯೋಜನೆಗಾಗಿ 300 ಎಕರೆ ಗುರುತಿಸಲಾಗಿದೆ. 2024ರ ಏಪ್ರಿಲ್ 1ರ ವೇಳೆಗೆ ಇಲ್ಲಿ ಕಂಪನಿಯು ತಯಾರಿಕೆ ಶುರು ಮಾಡುವ ಗುರಿ ಹಾಕಿಕೊಂಡಿದೆ. ಇದನ್ನು ಗಮನದಲ್ಲಿರಿಸಿಕೊಂಡು ಜುಲೈ 1ಕ್ಕೆ ಮುಂಚೆ ಕಂಪನಿಗೆ ಭೂಮಿ ಹಸ್ತಾಂತರಿಸಲಾಗುವುದು ಎಂದರು. ಕಂಪನಿಗೆ ದಿನಕ್ಕೆ 50 ಲಕ್ಷ ಲೀಟರ್ ನೀರು ಬೇಕಾಗುವುದಾಗಿ ತಿಳಿಸಿದೆ. ಇದನ್ನು ಪೂರೈಸುವ ಜೊತೆಗೆ ಗುಣಮಟ್ಟದ ವಿದ್ಯುತ್, ರಸ್ತೆ ಸಂಪರ್ಕ ಇತ್ಯಾದಿ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ಕಂಪನಿಯ ಸಿಬ್ಬಂದಿಗೆ ಬೇಕಾಗುವ ಕೌಶಲ್ಯ ವಿವರಗಳನ್ನು ಕೂಡ ಕೇಳಲಾಗಿದೆ. ಅದಕ್ಕೆ ತಕ್ಕಂತೆ ಸರ್ಕಾರದ ವತಿಯಿಂದ ಅರ್ಹರಿಗೆ ಕೌಶಲ್ಯಗಳ ತರಬೇತಿ ಕೊಟ್ಟು ಮಾನವ ಸಂಪನ್ಮೂಲ ಲಭ್ಯವಾಗಿಸಲು ಒತ್ತು ಕೊಡುವುದಾಗಿಯೂ ಅವರು ತಿಳಿಸಿದರು.

ತೈವಾನ್ ಮೂಲದ ಮುಂಚೂಣಿ ಕಂಪನಿಯು ಮೂರು ಹಂತಗಳಲ್ಲಿ ಘಟಕ ನಿರ್ಮಾಣ ಪೂರೈಸಿ, ಅಂತಿಮವಾಗಿ ಇಲ್ಲಿ ವರ್ಷಕ್ಕೆ 2 ಕೋಟಿ ಮೊಬೈಲ್‌ಗಳನ್ನು ತಯಾರಿಸುವ ಯೋಜನೆ ಹಾಕಿಕೊಂಡಿದೆ. ಈಗಾಗಲೇ ಭೂಮಿಗಾಗಿ ನಿಗದಿಗೊಳಿಸಿರುವ ಮೊತ್ತದಲ್ಲಿ ಶೇಕಡ 30ರಷ್ಟನ್ನು (90 ಕೋಟಿ ರೂಪಾಯಿ) ಕಂಪನಿಯು ಕೆ.ಐ.ಎ.ಡಿ.ಬಿ.ಗೆ ಪಾವತಿಸಿದೆ.

## ಹೊಸಹಳ್ಳಿ ಕೃಷಿ ಸಹಕಾರ ಸಂಘದ ಅಧ್ಯಕ್ಷರಾಗಿ ಮಂಜುನಾಥ ಮಾನೆ

ಸಾಸ್ವೆಹಳ್ಳಿ, ಜೂ. 1- ಹೋಬಳಿಯ ಹೊಸಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವಿ. ಮಂಜುನಾಥ್ ಮಾನೆ, ಉಪಾಧ್ಯಕ್ಷರಾಗಿ ಡಿ.ಪಿ. ಮಂಜುನಾಥ್ ಅವರು ಬುಧವಾರ ಅವಿರೋಧವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷ ಹೆಚ್. ಧನಂಜಯ, ಉಪಾಧ್ಯಕ್ಷೆ ಸುಮಿತ್ರಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಗಳಿಗೆ ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ವಿ.ಮಂಜುನಾಥ ಮಾನೆ, ಉಪಾಧ್ಯಕ್ಷ ಸ್ಥಾನಕ್ಕೆ ಡಿ.ಪಿ. ಮಂಜುನಾಥ್ ಅವರಿಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಸಹಕಾರ ಸಂಘಗಳ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ರಮೇಶ್ ಅವರು ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಎಂ. ನಾಗರಾಜ್, ಎಂ.ಜಿ. ಹಾಲಪ್ಪ, ಹೆಚ್.ಆರ್. ಹಾಲೇಶ್, ಎನ್.ಎಸ್. ಮಹೇಶ್ವರಪ್ಪ, ಡಿಸಿಸಿ ಬ್ಯಾಂಕಿನ ಕ್ಷೇತ್ರಾಧಿಕಾರಿ ವಿಜಯ್ ಕುಮಾರ್, ಬ್ಯಾಂಕಿನ ಸಿಬ್ಬಂದಿ ಜ್ಯೋತಿ ಉಪಸ್ಥಿತರಿದ್ದರು.



# ಗುಣ ಮಟ್ಟದ ಶಿಕ್ಷಣಕ್ಕೆ ಒತ್ತು ನೀಡಿ

### ಹರಪನಹಳ್ಳಿಯಲ್ಲಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ, ಮೇ 31- ಶೈಕ್ಷಣಿಕ ವರ್ಷವನ್ನು ಗುಣಾತ್ಮಕ ಶೈಕ್ಷಣಿಕ ವರ್ಷ ಎಂದೂ ಸರ್ಕಾರವು ಘೋಷಣೆ ಮಾಡಿರುವುದರಿಂದ ಶಿಕ್ಷಕರು, ಗುಣ ಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ಶಾಸಕ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಮೇಗಳಪೇಟೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಆಗಮಿಸಿ, ಮಕ್ಕಳಿಗೆ ಹೂ ಮತ್ತು ಚಾಕೋಲೇಟ್ ಹಾಗೂ ಪುಸ್ತಕ ನೀಡುವುದರ ಮೂಲಕ, ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಕಲಿತವರು ಉನ್ನತ ಹುದ್ದೆಯಲ್ಲಿ ಇದ್ದಾರೆ. ಆದ್ದರಿಂದ ಶಿಕ್ಷಕರು ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಿ, ವಿದ್ಯಾರ್ಥಿಗಳನ್ನು ದೇಶದ ಉತ್ತಮ ಪ್ರಜೆ ಆಗುವಂತೆ ಮಾರ್ಗದರ್ಶನ ನೀಡಲು ಶಿಕ್ಷಕರಿಗೆ ಕರೆ ನೀಡಿದರು. ಶಾಸಕರಾಗಿ ಆಯ್ಕೆಯಾದ ಮೊದಲ ಬಾರಿಗೆ ಭೇಟಿ ನೀಡಿದ್ದು, ಅವರಿಗೆ ಶಾಲಾ ವತಿಯಿಂದ ಸನ್ಮಾನಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ, ಎಸ್‌ಡಿಎಂಸಿ ಅಧ್ಯಕ್ಷರಾದ ರೇಖಮ್ಮ, ಮುಖ್ಯ ಶಿಕ್ಷಕ ಪಿ.ಅಂಜಿನಪ್ಪ, ಶಿಕ್ಷಕರುಗಳಾದ ಹೆಚ್.ಸಲೀಂ, ಬಸವರಾಜಪ್ಪ, ರತ್ನಮ್ಮ, ಕೊಟ್ರಮ್ಮ ಮುಖಂಡರಾದ ಹೆಚ್.ಎಂ.ಜಗದೀಶ್, ಮಟ್ಟಿ ಮಂಜುನಾಥ್, ಶಂಕರ್, ಸಾಸ್ವಿಹಳ್ಳಿ ನಾಗರಾಜ್, ಕವಿತಾ ಸುರೇಶ್, ಉಮಾಶಂಕರ್ ಸೇರಿದಂತೆ ಇತರರಿದ್ದರು.

## ಬಸಾಪುರದ ಸರ್ಕಾರಿ ಶಾಲಾ ಮಕ್ಕಳಿಗೆ ಗುಲಾಬಿ ಹೂ ನೀಡಿ ಸ್ವಾಗತ



ದಾವಣಗೆರೆ, ಮೇ 31- ಪಾಲಿಕೆ ವ್ಯಾಪ್ತಿಯ 21ನೇ ವಾರ್ಡಿನ ಬಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಗುಲಾಬಿ ಹೂ ನೀಡುವ ಮೂಲಕ ಸ್ವಾಗತ ಕೋರಲಾಯಿತು. ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಕೆ.ಎಲ್. ಹರೀಶ್, ಎಂ.ಎಸ್ ಕೊಟ್ರಯ್ಯ, ಶಾಲಾ ಮುಖ್ಯೋಪಾಧ್ಯಾಯ ಸೋಮಶೇಖರಪ್ಪ, ಶಿಕ್ಷಕ, ಶಿಕ್ಷಕಿಯರು ಹಾಜರಿದ್ದರು.

## ರಾಣೇಬೆನ್ನೂರು: ಮಾತಾ ಪಬ್ಲಿಕ್ ಶಾಲೆಯಲ್ಲಿ ಪ್ರಾರಂಭೋತ್ಸವ



ರಾಣೇಬೆನ್ನೂರು, ಮೇ 31- ಇಲ್ಲಿನ ಜೋಳಮರಡೇಶ್ವರ ನಗರದಲ್ಲಿರುವ ಮಾತಾ ಪಬ್ಲಿಕ್ ಶಾಲೆಯಲ್ಲಿ 2023-24 ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವವನ್ನು ವಿದ್ಯಾರ್ಥಿಗಳಿಗೆ ಹೂವು ಮತ್ತು ಸಿಹಿ ನೀಡುವ ಮೂಲಕ ಆಚರಿಸಲಾಯಿತು.

ಶಾಸಕ ಪ್ರಕಾಶ ಕೋಳಿವಾಡ ಮಕ್ಕಳನ್ನು ಸ್ವಾಗತಿಸುವ ಮೂಲಕ ಮಾತನಾಡಿ, ಇಂದಿನ ಮಕ್ಕಳೇ ನಾಡಿನ ಪ್ರಜೆಗಳು. ಇವರ ಭವಿಷ್ಯ ಉಜ್ವಲವಾಗಲೆಂದು ಶುಭ ಹಾರೈಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಹೆಚ್. ಪಾಟೀಲ ಮಾತನಾಡಿ, ಶಾಲೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಸಂಸ್ಕೃತಿಯನ್ನು ಕಲಿಸಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಬಿ.ಹೆಚ್.ಮಡ್ಲೂರ, ವಿಶ್ವನಾಥ್ ಕಮ್ಮಾರ, ಮಹಮ್ಮದ್ ರಫೀಕ್, ಅಶೋಕ ಪೂಜಾರ್, ಸಿ.ಎಸ್. ಲತಾ, ವ್ಯವಸ್ಥಾಪಕ ಎಸ್. ಚನ್ನಬಸಪ್ಪ, ಸಿಬ್ಬಂದಿಗಳಾದ ಪುಷ್ಪ ಉಜ್ಜೇರ, ಚೈತ್ರಾ, ಆಶಾ, ನಾಗೇಂದ್ರ ಮಡಿವಾಳರ, ಪ್ರವೀಣ ಗುರುಗಳು ಉಪಸ್ಥಿತರಿದ್ದರು.

ಇದೇ ವೇಳೆ ನೂತನ ಶಾಸಕ ಪ್ರಕಾಶ್ ಕೋಳಿವಾಡ ಅವರನ್ನು ಸನ್ಮಾನಿಸಲಾಯಿತು.

# ರಾಗಿ ಮಾರಾಟದ ಹಣ ಪಾವತಿಸಲು ಮನವಿ



**ಜಗಳೂರು**

ಜಗಳೂರು, ಮೇ 31- ತಾಲ್ಲೂಕಿನಲ್ಲಿ ಸರ್ಕಾರದ ರಾಗಿ ಖರೀದಿ ಕೇಂದ್ರಕ್ಕೆ ರಾಗಿ ಮಾರಾಟ ಮಾಡಿದ್ದು, ರೈತರಿಗೆ ಬರಬೇಕಾದ ಹಣ ಇದುವರೆಗೂ ಪಾವತಿ ಯಾಗದಿರುವ ಬಗ್ಗೆ ಮತ್ತು ತಕ್ಷಣವೇ ರೈತರಿಗೆ ಹಣ ಪಾವತಿಸುವಂತೆ ಒತ್ತಾಯಿಸಿ ಇಂದು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಶೀರ್ ಅಹ್ಮದ್ ತಿಳಿಸಿದ್ದಾರೆ.

ಎಪಿಎಂಸಿ ಆವರಣದಲ್ಲಿ ಕೆಲವು ತಿಂಗಳ ಹಿಂದೆ ತೆರೆಯಲಾಗಿದ್ದ ಸರ್ಕಾರದ ಬೆಂಬಲ ಬೆಲೆಯ ರಾಗಿ ಖರೀದಿ ಕೇಂದ್ರಕ್ಕೆ ತಾಲ್ಲೂಕಿನ ಸಾವಿರಾರು ಜನ ಸಣ್ಣ ರೈತರು ರಾಗಿಯನ್ನು ಮಾರಾಟ ಮಾಡಿದ್ದರು. ಈ ಪೈಕಿ ನೂರಾರು ಜನರಿಗೆ ಈವರೆಗೂ ಹಣ ಪಾವತಿ ಆಗಿಲ್ಲ. ಖರೀದಿ ಕೇಂದ್ರದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳಿಗೆ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಆಯುಕ್ತರಿಗೂ ಮನವಿ ಸಲ್ಲಿಸಿ ತಕ್ಷಣವೇ ಹಣ ಬಿಡುಗಡೆಗೆ ಮನವಿ ಮಾಡಲಾಯಿತು.

ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ತಕ್ಷಣವೇ ಹಣ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ತಿಳಿಸಿದ್ದಾರೆ. ನಿಯೋಗದಲ್ಲಿ ಕೆಪಿಸಿಸಿ ಕಾರ್ಯದರ್ಶಿ ಅಸಗೋಡು ಜಯಸಿಂಹ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷರು ಪಿ.ಎಸ್. ಸುರೇಶ್ ಗೌಡ ಸೇರಿದಂತೆ ತಾಲ್ಲೂಕಿನ ವಿವಿಧ ಹಳ್ಳಿಗಳ ರೈತರು ಮತ್ತು ರೈತ ಮುಖಂಡರು ಭಾಗವಹಿಸಿದ್ದರು ಎಂದು ಅವರು ತಿಳಿಸಿದ್ದಾರೆ.

# ಚೀತಾಗಳನ್ನು ಬೇಲಿಯಲ್ಲಿ ಇರಿಸುವುದಿಲ್ಲ

**ಕೇಂದ್ರ ಸಮಿತಿ ಅಧ್ಯಕ್ಷ**

ನವದೆಹಲಿ, ಜೂ. 1 – ದಕ್ಷಿಣ ಆಫ್ರಿಕಾ ಹಾಗೂ ನಮೀಬಿಯಾಗಳ ರೀತಿಯಲ್ಲಿ ಚೀತಾಗಳನ್ನು ಬೇಲಿ ಹಾಕಿದ ಪ್ರದೇಶದಲ್ಲಿ ಇರಿಸಲು ಬಯಸುವುದಿಲ್ಲ ಎಂದು ಕೇಂದ್ರ ಸರ್ಕಾರದ ಸಮಿತಿಯೊಂದು ತಿಳಿಸಿದೆ.

ಭಾರತದಲ್ಲಿ ಮತ್ತೆ ಚೀತಾಗಳ ಸಂತತಿ ಬೆಳೆಯುವಂತೆ ಮಾಡಲು ದಕ್ಷಿಣ ಆಫ್ರಿಕಾ ಹಾಗೂ ನಮೀಬಿಯಾಗಳಿಂದ ಚೀತಾಗಳನ್ನು ತರಿಸಲಾಗಿದೆ. ಚೀತಾಗಳನ್ನು ಭಾರತದಲ್ಲಿ ಸಾಕುವ ಬಗ್ಗೆ ಉಭಯ ದೇಶಗಳ ಪರಿಣಿತರು ನೆರವಾಗುತ್ತಿದ್ದಾರೆ. ಚೀತಾಗಳು ಬೇಟೆಗೆ ಸಿಲುಕುವುದನ್ನು ತಪ್ಪಿಸಲು ಹಾಗೂ ಸಂಘರ್ಷ ತಪ್ಪಿಸಲು ಬೇಲಿ ಹಾಕಬೇಕು ಎಂದು ಪರಿಣಿತರು ಸಲಹೆ ನೀಡಿದ್ದಾರೆ.

ಆದರೆ, ಈ ರೀತಿ ಬೇಲಿ ಹಾಕುವುದರಿಂದ ಜಾನುವಾರುಗಳ ಸಹಜ ಸಂಚಾರಕ್ಕೆ ಅಡ್ಡಿಯಾಗುತ್ತದೆ. ಇದು ಸ್ಥಳೀಯವಾಗಿ ಜೀನ್ ವಿನಿಮಯಕ್ಕೆ ತೊಡಕಾಗುತ್ತದೆ ಎಂದು ಭಾರತದ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಬೇಲಿ ಹಾಕುವುದು ಅತ್ಯಂತ ಬೋಗಸ್ ವಿಚಾರ. ಇದು ವನ್ಯಜೀವಿ ಸಂರಕ್ಷಣೆಯ ಮೂಲ ಅಗತ್ಯಕ್ಕೆ ವಿರುದ್ಧವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಬೇಲಿ ಹಾಕಿದ ವಿಧಾನ ಇಲ್ಲಿ ಕೆಲಸ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ರಚಿಸಿರುವ ಚೀತಾ ಸಂಚಾಲನಾ ಸಮಿತಿಯ ಅಧ್ಯಕ್ಷ ರಾಜೇಶ್ ಗೋಪಾಲ್ ಹೇಳಿದ್ದಾರೆ.

ನಾವು ನಮ್ಮದೇ ಆದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಹೊಂದಿದ್ದೇವೆ. ನಾವೂ 50 ವರ್ಷಗಳಿಂದ ಹುಲಿಗಳನ್ನು ನಿರ್ವಹಿಸುತ್ತಿದ್ದೇವೆ. ನಾವು ಚೀತಾಗಳನ್ನೂ ನಿರ್ವಹಿಸಲಿದ್ದೇವೆ ಎಂದವರು ತಿಳಿಸಿದ್ದಾರೆ.

ಈ ಬಗ್ಗೆ ಸುದ್ದಿಸಂಸ್ಥೆಯೊಂದರ ಜೊತೆ ಮಾತನಾಡಿದ್ದ ದಕ್ಷಿಣ ಆಫ್ರಿಕಾದ ವನ್ಯಜೀವಿ ಪರಿಣಿತ ವಿನ್ಸೆಂಟ್ ವ್ಯಾನ್ ಮೆರ್ವೆ, ಚೀತಾಗಳನ್ನು ಮುಕ್ತವಾಗಿ ಮರು ನೆಲೆಗೊಳಿಸಿದ ಇತಿಹಾಸವೇ ಇಲ್ಲ. ಆಫ್ರಿಕಾದಲ್ಲಿ ಈ ದಿಸೆಯಲ್ಲಿ 15 ಬಾರಿ ನಡೆಸಿದ ಪ್ರಯತ್ನಗಳು ವಿಫಲವಾಗಿವೆ ಎಂದಿದ್ದರು. ನಾವು ಎಲ್ಲಾ ಚೀತಾಗಳನ್ನು ಬೇಲಿಯಲ್ಲಿ ಇರಿಸಬೇಕು ಎಂದು ಸಲಹೆ ನೀಡುವುದಿಲ್ಲ. ಆದರೆ, ಎರಡು ಇಲ್ಲವೇ ಮೂರು ಚೀತಾಗಳನ್ನು ಈ ರೀತಿಯ ಬೇಲಿ ಪ್ರದೇಶದಲ್ಲಿ ಇರಿಸಬೇಕು ಎಂದಿದ್ದರು.

# ಹರಿಹರ : ದುಶ್ಚಟಗಳು ಯುವ ಸಮುದಾಯದ ಶತ್ರು



ಹರಿಹರ, ಜೂ. 1 – ದುಶ್ಚಟಗಳು ಯುವ ಸಮುದಾಯಕ್ಕೆ ದೊಡ್ಡ ಶತ್ರುವಾಗಿವೆ. ದೇಶದಲ್ಲಿ ಶೇ.60ರಷ್ಟು ಯುವಜನರು ಇರುವ ಕಾರಣ, ಈ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಬೇಕಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ದಾವಣಗೆರೆ ಜಿಲ್ಲೆಯ ಹಿರಿಯ ನಿರ್ದೇಶಕ ವಿ. ವಿಜಯಕುಮಾರ್ ನಾಗನಾಳ ಹೇಳಿದರು.

ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಹರಿಹರ ಹಾಗೂ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ವಿದ್ಯಾರ್ಥಿಗಳಿಗೆ ಕಾಲೇಜಿನ ಸಭಾಂಗಣದಲ್ಲಿ ವಿಶ್ವ ತಂಬಾಕು ವಿರೋಧಿ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಮಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕಿ ಶ್ವೇತಾ ಈಶ್ವರ್ ಮಾತನಾಡಿ, ಸಹವಾಸ ದೋಷದಿಂದ, ಕುತೂಹಲಕ್ಕಾಗಿ ಆರಂಭವಾಗುವ ದುಶ್ಚಟಗಳು, ಬೆಳೆಯುವ ಮಕ್ಕಳ ಬದುಕನ್ನು ನಾಶ ಮಾಡಿ ಬಿಡುತ್ತವೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷರಾದ ರಾಜಶೇಖರ ಕೊಂಡಜ್ಜಿ ಹಾಗೂ ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯರಾದ ಹೊನ್ನಾಳಿ ಬಾಬಣ್ಣ ಮಾತನಾಡಿದರು.

ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲ ಲಕ್ಷಣ ನಾಯ್ಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರುಗಳಾದ ಗಣೇಶ ಮತ್ತು ಹರೀಶ ಅವರು ಉಪಸ್ಥಿತರಿದ್ದರು. ತಾಲ್ಲೂಕಿನ ಯೋಜನಾಧಿಕಾರಿ ಗಣಪತಿ ಮಾಳಂಜಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕ ಚರಣ್ ರಾಜ್ ನಿರೂಪಿಸಿದರು.

## ಸಂಘಟನೆಗಳ ವಿರುದ್ಧ ಕ್ರಮ

(1ನೇ ಪುಟದಿಂದ) ತಡೆಯಲು ಯಾವ ರೀತಿ ಕಠಿಣ ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ ಎಂದು ಅವರು ತಿಳಿಸಿದರು.

ಪಿಎಸ್‌ಐ ಪರೀಕ್ಷೆ ಅಕ್ರಮದ ಬಗ್ಗೆ ಹಿರಿಯ ಅಧಿಕಾರಿಗಳ ಬಳಿ ಚರ್ಚೆ ಮಾಡಿದ್ದು, ಮುಂದೆ ಯಾವ ರೀತಿ ಕ್ರಮ ಕೈಗೊಳ್ಳಬೇಕು, ಆ ರೀತಿಯ ಕ್ರಮ ಕೈಗೊಳ್ಳುತ್ತೇವೆ. ಯಾರು ನೇರ ಹಾಗೂ ಪರೋಕ್ಷವಾಗಿ ಭಾಗಿಯಾಗಿದ್ದಾರೋ ಅವರ ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟು ಹಾಕುವುದಿಲ್ಲ.

ಭಜರಂಗದಳ ನಿಷೇಧದ ಮಾಡುವ ಸಂದರ್ಭ ಬರಲಾರದು. ಒಂದು ವೇಳೆ ಬಂದರೆ ಮಾಡುತ್ತೇವೆ ಎಂದು ಹೇಳಿದರು.

## ನೋಟು ತ್ವರಿತ ವಿಚಾರಣೆಗೆ ನಕಾರ

(1ನೇ ಪುಟದಿಂದ) ಬೇಸಿಗೆ ರಜೆಯ ಅವಧಿಯಲ್ಲಿ ಈ ರೀತಿಯ ಅರ್ಜಿಗಳ ವಿಚಾರಣೆ ನಡೆಸುವು ದಿಲ್ಲ ಎಂದು ನ್ಯಾಯಮೂರ್ತಿ ಸುಧಾಂಶು ಧುಲಿಯ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಈ ಮನವಿಯನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠದ ಎದುರು ಮಂಡಿಸಲಾಗುವುದು ಎಂದವರು ಹೇಳಿದ್ದಾರೆ.

ಬ್ಯಾಂಕುಗಳಲ್ಲಿ ನೋಟುಗಳನ್ನು ಯಾವುದೇ ದಾಖಲೆ ಪಡೆಯದೇ ವಿನಿಮಯ ಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ 50 ಸಾವಿರ ಕೋಟಿ ರೂ.ಗಳ ಬದಲಾವಣೆ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ವಿಚಾರಣೆ ನಡೆಸುವುದು ವಿಳಂಬವಾದಷ್ಟು ಕಪ್ಪು ಹಣ ಬ್ಯಾಂಕುಗಳಲ್ಲಿ ವಿನಿಮಯವಾಗಲಿದೆ ಎಂದು ಅರ್ಜಿದಾರರು ವಾದಿಸಿದ್ದರು.

## ಹರಿಹರ ಗಂಗಾನಗರ ನಿವಾಸಿಗಳನ್ನು ನಗರಸಭೆ ಜಾಗಕ್ಕೆ ಸ್ಥಳಾಂತರಿಸಲು ಆಗ್ರಹ



ಹರಿಹರ, ಜೂ.1- ಮಳೆ ಬಂದರೆ ಸಂಪೂರ್ಣ ಮುಳುಗಡೆಯಾಗುವ ಗಂಗಾನಗರದಲ್ಲಿರುವ ನಿವಾಸಿಗಳನ್ನು ನಗರಸಭೆ ಜಾಗಕ್ಕೆ ಸ್ಥಳಾಂತರಿಸುವಂತೆ ನಗರಸಭೆ ಸದಸ್ಯ ಎಸ್.ಎಂ. ವಸಂತ್ ಆಯುಕ್ತರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

29 ನೇ ವಾರ್ಡ್‌ನಲ್ಲಿ ಬರುವ ಗಂಗಾನಗರದಲ್ಲಿ 25ರಿಂದ 30 ಮನೆಗಳಿದ್ದು, ಮಳೆ ಬಂತೆಂದರೆ, ತುಂಗಭದ್ರಾ ನೀರು ನುಗ್ಗಿ ಸಂಪೂರ್ಣ ಮುಳುಗಡೆಯಾಗುತ್ತದೆ. ಹಾಗಾಗಿ ನಿವಾಸಿಗಳು ಜೀವನ ನಡೆಸಲು ತುಂಬಾ ಕಷ್ಟಕರವಾಗಿರುವುದರಿಂದ ಕೂಡಲೇ ನಗರಸಭೆ ಜಾಗದಲ್ಲಿ ಅವರಿಗೆ ಮನೆಗಳನ್ನು ನಿರ್ಮಿಸಿಕೊಂಡು ಇರುವುದಕ್ಕೆ ಅವಕಾಶ ಕಲ್ಪಿಸುವಂತೆ ಆಯುಕ್ತರಿಗೆ ಮನವಿ ಮಾಡಿದ್ದಾರೆ.

## ಅಡಿಕೆ ಬೆಳೆಯಿಂದ ದೂರ ಇರಲು ಸಲಹೆ

(1ನೇ ಪುಟದಿಂದ) ಹೆಚ್ಚು ಜನಸಂಖ್ಯೆ ಇರುವಲ್ಲಿ ಕಡಿಮೆ ಆಸ್ಪತ್ರೆ ತೆರೆದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಇನ್ನೂ ಹೆಚ್ಚು ಆಸ್ಪತ್ರೆ, ಎರಡು ಹಾಸ್ಟೆಲ್ ಮಾಡುವ ಬಗ್ಗೆ ಸಂಬಂಧಪಟ್ಟ ಸಚಿವರ ಜೊತೆ ಮಾತನಾಡುವುದಾಗಿ ತಿಳಿಸಿದರು.

ವೇದಿಕೆಯಲ್ಲಿ ಪೌರಾಯುಕ್ತ ನಿಂಗಪ್ಪ ಕುಮ್ಮಣ್ಣನವರ, ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ್, ಕಾರ್ಯನಿರ್ವಾಹಕ ಅಧಿಕಾರಿ ಸುಮಲತಾ, ತಹಶೀಲ್ದಾರ್ ಗುರುಬಸವರಾಜ್ ಇದ್ದರು.

## ಮೇ ತಿಂಗಳಲ್ಲಿ 1.57 ಲಕ್ಷ ಕೋಟಿ ಜಿಎಸ್ಟಿ

(1ನೇ ಪುಟದಿಂದ) ಟಿ. ಲೆಕ್ಕ ಪರಿಶೋಧನೆಗಳು ನಡೆಯಲಿವೆ. ಹೀಗಾಗಿ ಮುಂಬರುವ ತಿಂಗಳುಗಳಲ್ಲಿ ಜಿ.ಎಸ್.ಟಿ. ಸಂಗ್ರಹ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಕೆ.ಪಿ.ಎಂ.ಜಿ. ಸಂಸ್ಥೆಯ ಅಭಿಷೇಕ್ ಜೈನ್ ತಿಳಿಸಿದ್ದಾರೆ.


## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ದಿ|| ಕಡ್ಲೇಬಾಳ್ ಕೆ.ಕೆ. ನಾರಪ್ಪನವರು**

ಬಿ.ಕಲ್ಪನಹಳ್ಳಿ, ನಿಧನ : 02.06.2021

*ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.*
*ಸದಾ ನಿಮ್ಮ ಸ್ಮರಣೆಯಲ್ಲಿ*
*ನೀವು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಿರುತ್ತೇವೆ.*
*ಅನುಕ್ಷಣವು ನಿಮ್ಮ ಸ್ಮರಣಯೇ ನಮಗೆ ದಿವ್ಯ ಚೇತನ*
*ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು*
*ಪ್ರಾರ್ಥಿಸುವೆವು.*

*ಸದಾ ನಿಮ್ಮ ನೆನಪಿನಲ್ಲಿ...*

ಪತ್ನಿ: **ಸುಜಾತ** ಮಕ್ಕಳಾದ : **ಕಿರಣ್, ವರುಣ್**
ಸೊಸೆ; **ರಾಜೇಶ್ವರಿ** ಮೊಮ್ಮಗಳು: **ಕೀರ್ತನ**
**ಕಡ್ಲೇಬಾಳ್ ವಂಶಸ್ಥರು ಹಾಗೂ ಬಂಧು –ಮಿತ್ರರು**. ಬಿ. ಕಲ್ಪನಹಳ್ಳಿ


## ಕಾಯ್ದೆ ಉಳಿಸಲು ಶಿಫಾರಸ್ಸು

(1ನೇ ಪುಟದಿಂದ) ಬಳಸಿಕೊಳ್ಳುತ್ತಾರೆ. ಈ ಒಂದು ಕಾರಣದ ಆಧಾರದ ಮೇಲೆ ಕಾಯ್ದೆಗಳನ್ನು ವಾಪಸ್ ಪಡೆಯಲಾಗದು.

ಕಾಯ್ದೆಯ ದುರ್ಬಳಕೆ ತಡೆಗೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಆಯೋಗ ತಿಳಿಸಿದೆ.

## ದಿಢೀರ್ ಬ್ರೇಕ್ ಹಾಕಿದ ಪರಿಣಾಮ ಕಂಬಿ ಬಡಿದು ಪ್ರಯಾಣಿಕ ಸಾವು

ದಾವಣಗೆರೆ, ಜೂ.1- ಪ್ರಾಣಿಯೊಂದು ಅಡ್ಡ ಬಂದ ಕಾರಣಕ್ಕಾಗಿ ವೇಗವಾಗಿ ಚಲಿಸುತ್ತಿದ್ದ ಬಸ್‌ಗೆ ದಿಢೀರ್ ಬ್ರೇಕ್ ಹಾಕಿದ ಪರಿಣಾಮ ಯುವಕನೊಬ್ಬ ಮೃತಪಟ್ಟ ಘಟನೆ ನ್ಯಾಮತಿ ತಾಲ್ಲೂಕು ಕುಂಕುವರಸ್ತೆಯಲ್ಲಿ ಜರುಗಿದೆ.

ಕುಟುಂಬ ನಾಲ್ವರು ಪ್ರವಾಸ ಮುಗಿಸಿಕೊಂಡು ಎಸ್.ಆರ್.ಎಂ.ಎಸ್. ಬಸ್‌ನಲ್ಲಿ ವಾಪಾಸ್ ಬರುವಾಗ ಕುಂಕುವ ರಸ್ತೆಯಲ್ಲಿ ಬಸ್ ಬ್ರೇಕೇ ಹಾಕಿದ್ದರಿಂದ ಬಸ್‌ನಲ್ಲಿರುವ ಕಂಬಿ ಎದೆ ಹಾಗೂ ಮುಖಕ್ಕೆ ಬಡಿದದ್ದರಿಂದ ಮೂಗಿನಿಂದ ರಕ್ತ ಸುರಿದ ಸ್ಥಳದಲ್ಲಿಯೇ ಶಶಿಕುಮಾರ (28) ಮೃತಪ್ಪಟಿದ್ದಾನೆ. ಈ ಕುರಿತು ಮೃತರ ತಂದೆ ಗಣೇಶ್ ನಾಯ್ಕ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ಹೊಳಲ್ಕೆರೆ : ಕಾಂಗ್ರೆಸ್ ಸಂಘಟನಾ ಸಭೆ



ಹೊಳಲ್ಕೆರೆ, ಜೂ. 1- ಹೊಳಲ್ಕೆರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅನಿರೀಕ್ಷಿತ ಸೋಲು ಆಗಿದ್ದು, ಈ ಕುರಿತು ಚರ್ಚೆ ಹಾಗೂ ಪಕ್ಷದ ಸಂಘಟನಾ ಸಭೆಯನ್ನು ನಾಡಿದ್ದು ದಿನಾಂಕ 3ರ ಶನಿವಾರ ಬೆಳಗ್ಗೆ 10.30ಕ್ಕೆ ಹೊಳಲ್ಕೆರೆ ಗಣಪತಿ ಕಲ್ಯಾಣ ಮಂಟಪದಲ್ಲಿ ಕರೆಯಲಾಗಿದೆ ಎಂದು ಮಾಜಿ ಸಚಿವ ಹೆಚ್.ಆಂಜನೇಯ ತಿಳಿಸಿದ್ದಾರೆ.

ರಾಜ್ಯದಲ್ಲಿ ನಿರೀಕ್ಷೆಗೂ ಮೀರಿ ಕಾಂಗ್ರೆಸ್ ಪಕ್ಷಕ್ಕೆ ಜನ ಬಹುಮತ ನೀಡಿದ್ದಾರೆ. ಆದರೆ, ಹೊಳಲ್ಕೆರೆ ಕ್ಷೇತ್ರದಲ್ಲಿ ಕಾರ್ಯಕರ್ತರ ಹೋರಾಟ, ಶ್ರಮದ ಮಧ್ಯೆಯೂ ಕಡಿಮೆ ಮತಗಳ ಅಂತರದಲ್ಲಿ ನನಗೆ ಸೋಲು ಆಗಿದೆ. ಈ ಕುರಿತು ಚಿಂತನೆ ಹಾಗೂ ಬರುವ ಜಿಲ್ಲಾ-ತಾಲ್ಲೂಕು ಪಂಚಾಯತ್, ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಸಂಘಟನೆ ಕೈಗೊಳ್ಳುವ ಹಿನ್ನೆಲೆಯಲ್ಲಿ ಸಭೆಯನ್ನು ಕರೆಯಲಾಗಿದೆ.

ಸಮಾಜ ಕಲ್ಯಾಣ ಸಚಿವನಾಗಿ ಐದು ವರ್ಷ ಆಡಳಿತ ನಡೆಸಲು ಅವಕಾಶ ಕೊಟ್ಟ ಕ್ಷೇತ್ರದ ಜನರು ಈ ಬಾರಿಯೂ ನನ್ನ ಗೆಲುವು ಖಚಿತ ಎಂದೇ ಭಾವಿಸಿದ್ದರು.

ಆದರೆ, ಬೆರಳೆಣಿಕೆಯ ಪಕ್ಷದ್ರೋಹಿಗಳ ಕುತಂತ್ರ ಹಾಗೂ ಬಿಜೆಪಿ ಅಭ್ಯರ್ಥಿ ಮತ್ತು ಆತನ ಇಡೀ ಕುಟುಂಬದ ಸದಸ್ಯರು ಕ್ಷೇತ್ರದಲ್ಲಿ ಹಣದ ಹೊಳೆಯನ್ನೇ ಹರಿಸುವ ಜೊತೆಗೆ ದೇವರ ಭಾವಚಿತ್ರಗಳನ್ನೇ ದುರ್ಬಳಕೆ ಮಾಡಿಕೊಂಡಿದ್ದರಿಂದ ನನಗೆ ಸೋಲು ಆಗಿದೆ. ಈ ಸೋಲು ನನಗಿಂತಲೂ ಪಕ್ಷದ ನಿಷ್ಠಾವಂತರು, ಮುಖಂಡರು, ಅಭಿಮಾನಿಗಳಲ್ಲಿ ಆಘಾತ ಉಂಟು ಮಾಡಿರುವುದು ವಾಸ್ತವ ಸತ್ಯ ಎಂದು ಅವರು ಹೇಳಿದ್ದಾರೆ.

## ರಸ್ತೆ ಅಪಘಾತದಲ್ಲಿ ಬೈಕ್ ಸವಾರನ ಸಾವು

**ನ್ಯಾಮತಿ**

ನ್ಯಾಮತಿ, ಜೂ. 1- ತಾಲ್ಲೂಕಿನ ಸವಳಂಗ - ಶಿಕಾರಿಪುರ ರಸ್ತೆಯ ಚಿನ್ನಿಕಟ್ಟೆ ಬಳಿಯ ದೇವೇಂದ್ರಯ್ಯನವರ ಜಮೀನ ಬಳಿ ಟಿವಿಎಸ್ ಎಕ್ಸೆಲ್ ಮೋಟರ್ ಸೈಕಲ್ ಮತ್ತು ಕಾರು ಮಧ್ಯೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಚಿನ್ನಿಕಟ್ಟೆ ಗ್ರಾಮದ ಮುನೀರ್ ಸಾಬ್ (60) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಜಮೀನು ಕೆಲಸಕ್ಕೆ ಕೆಲಸದವರನ್ನು ಕರೆದು ಬರಲೆಂದು ಚಿನ್ನಿಕಟ್ಟೆಯಿಂದ ಶಿಕಾರಿಪುರ ಕಡೆ ಹೋಗುತ್ತಿರುವಾಗ ಎದುರಿಗೆ ಬಂದ ಕಾರು ಮೋಟರ್ ಸೈಕಲ್‌ಗೆ ಡಿಕ್ಕಿಯಾಗಿ ಬೈಕ್ ಸವಾರನ ಬಲಗಾಲು, ಎದೆ, ಪಕ್ಕೆಗೆ ತೀವ್ರ ತರ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ಬೈಕ್ ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಆತನ ಮಗ ಸನಾವುಲ್ಲಾ ಕಾರು ಚಾಲಕ ವಿನಯ್ ವಿರುದ್ಧ ನ್ಯಾಮತಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಉದ್ಯೋಗಕ್ಕೆ ತಕ್ಕ ಕೌಶಲ್ಯ ರೂಢಿಸಿಕೊಳ್ಳಿ: ಕುಂಬಾರ್

ದಾವಣಗೆರೆ, ಜೂ. 1- ಪ್ರಸ್ತುತ ದಿನಮಾನದಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗದಿದ್ದರೆ ಏಕೆ, ಓದಬೇಕೆಂಬ ಮನೋಭಾವನೆ ಇದೆ. ಆದರೆ ಇದು ಸರಿಯಾದ ನಿಲುವಲ್ಲ. ಉದ್ಯೋಗಕ್ಕೆ ಅನುಗುಣವಾಗಿ ಕೌಶಲ್ಯವನ್ನು ರೂಢಿಸಿಕೊಳ್ಳಬೇಕು ಎಂದು ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ್ ಹೇಳಿದರು.

ನಗರದ ಜಿ.ಎಂ. ಎಸ್. ಅಕಾಡೆಮಿಯ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಹಮ್ಮಿಕೊಂಡಿದ್ದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಂತಹ ದೊಡ್ಡ ದೊಡ್ಡ ದೇಶಗಳಲ್ಲಿ 'ಮೇಕ್ ಇನ್ ಇಂಡಿಯಾ', 'ಸ್ಟಾರ್ಟ್ ಅಪ್' ಸೇರಿದಂತೆ ಅನೇಕ ಯೋಜನೆಗಳ ಮೂಲಕ ಪ್ರತಿ ವರ್ಷ ಲಕ್ಷಾಂತರ ಉದ್ಯೋಗಗಳು ಲಭ್ಯವಾಗುತ್ತಿವೆ. ಇದರೊಟ್ಟಿಗೆ ಕಾರ್ಪೋರೇಟ್ ಕಂಪನಿಗಳಲ್ಲೂ ಸಹ ಉದ್ಯೋಗಗಳು ಸಿಗುತ್ತವೆ ಎಂದರು.

ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಮಾನಸಿಕ ಹಾಗೂ ಬೌದ್ಧಿಕವಾಗಿ ಸಿದ್ಧರಾಗಬೇಕು. ಅಗತ್ಯ ಕೌಶಲ್ಯವನ್ನು ಸಹ ರೂಢಿಸಿಕೊಳ್ಳಬೇಕೆಂದು ಹೇಳಿದರು.

ಎಲ್ಲರಿಗೂ ಉದ್ಯೋಗ ಪಡೆಯಬೇಕೆಂಬುದು ನೂತನ ಶಿಕ್ಷಣ ನೀತಿಯಾಗಿದೆ. ಇಂಜಿನಿಯರಿಂಗ್ ಪದವಿಯ ನಾಲ್ಕು ಸೆಮಿಸ್ಟರ್ ಮುಗಿದಿದ್ದು, ಉಳಿದ ನಾಲ್ಕು ಸೆಮಿಸ್ಟರ್‌ಗಳಲ್ಲಿ ಕೌಶಲ್ಯ ಆಧರಿತ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನ್ವಯ ಎಲ್ಲರಿಗೂ ಉದ್ಯೋಗ ನೀಡುವ ಸಲುವಾಗಿ ಅವಶ್ಯ ತರಬೇತಿ ನೀಡಲಾಗುತ್ತಿದೆ. ಕೌಶಲ್ಯ ತರಬೇತಿಗೂ ಸಹ ವಿವಿಧ ಕೋರ್ಸ್‌ಗಳಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.


ಉದ್ಯೋಗ ಅರಸಿ ಉದ್ಯೋಗ ಮೇಳಕ್ಕೆ ಆಗಮಿಸಿದ್ದ ವಿದ್ಯಾರ್ಥಿಗಳು ಸರದಿಯಲ್ಲಿ ನಿಂತಿರುವುದು.

ಉದ್ಯೋಗ ಮೇಳಕ್ಕೆ 30 ಕಂಪನಿಗಳು ಬಂದಿದ್ದು, ಮೂರು ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಮುಂದಾಗಿರುವುದು ಸಂತಸದ ಸಂಗತಿ. ಈ ನಿಟ್ಟಿನಲ್ಲಿ ಜಿಎಂಎಸ್ ಅಕಾಡೆಮಿ ಮೇಳವನ್ನು ಆಯೋಜಿಸಿರುವುದು ಶ್ಲಾಘನೀಯ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಪ್ರತಿಯೊಬ್ಬರಿಗೂ ಉದ್ಯೋಗಾವಕಾಶ ಮುಖ್ಯ. ಕಂಪನಿಗಳಿಗೆ ಉತ್ತಮ ಕೆಲಸಗಾರರು ಸೇರಿಕೊಂಡರೆ ಕಂಪನಿಯ ಪ್ರಗತಿಯ ಜೊತೆಗೆ ಕುಟುಂಬ ಮತ್ತು ದೇಶ ಕೂಡ ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದು ಹೇಳಿದರು.

ಜಿಎಂಎಸ್ ಅಕಾಡೆಮಿ ಆಯೋಜಿಸಿರುವ ಉದ್ಯೋಗ ಮೇಳದಲ್ಲಿ ಬಂದಿರುವ ಕಂಪನಿಗಳಿಗೆ ಆರು ಸಾವಿರ ಉದ್ಯೋಗಿಗಳ ಅವಶ್ಯವಿದ್ದು, ಈಗಾಗಲೇ 4500 ಜನ ಹೆಸರು ನೋಂದಾಯಿಸಿಕೊಂಡಿದ್ದಾರೆ. ಅಗತ್ಯವಿದ್ದರೆ ಮುಂದಿನ ಆರು ತಿಂಗಳ ಬಳಿಕ ಇಂತಹದೇ ಬೃಹತ್ ಉದ್ಯೋಗ ಮೇಳ ಆಯೋಜನೆ ಮಾಡುವುದಾಗಿ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀಶೈಲ ಎಜುಕೇಶನಲ್ ಟ್ರಸ್ಟ್ ಖಜಾಂಚಿ ಜಿ.ಎಸ್. ಅನಿತ್‌ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಮೇಳದಲ್ಲಿ ಬಂದಿರುವ ಕಂಪನಿಗಳಲ್ಲಿ ನಿಮಗಿಷ್ಟವಾದ ಕಂಪನಿಗಳನ್ನು ಆಯ್ಕೆ ಮಾಡಿಕೊಂಡು ಕೆಲಸ ಮಾಡುವ ಮೂಲಕ ಕಂಪನಿಗೂ ಒಳ್ಳೆಯ ಹೆಸರನ್ನು ತರಲು ಸಲಹೆ ನೀಡಿದರು.

ಮಾಜಿ ಶಾಸಕ ಪ್ರೊ. ಲಿಂಗಣ್ಣ, ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮುಖಂಡರಾದ ಶ್ರೀನಿವಾಸ ದಾಸಕರಿಯಪ್ಪ, ಹೆಚ್.ಎನ್. ಶಿವಕುಮಾರ್, ಚಂದ್ರಶೇಖರ್ ಪೂಜಾರ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಮಾಜಿ ಉಪ ಮೇಯರ್ ಗಾಯತ್ರಿಬಾಯಿ ಖಂಡೋಜಿರಾವ್, ಟ್ರಸ್ಟ್ ಕಾರ್ಯದರ್ಶಿ ಜಿ.ಎಂ. ಲಿಂಗರಾಜ್, ಪ್ರಾಚಾರ್ಯರಾದ ಡಾ. ಸಂಜಯ್ ಪಾಂಡೆ, ಶ್ವೇತಾ ಎಸ್. ಮರಿಗೌಡರ್, ಕಾಲೇಜಿನ ಉದ್ಯೋಗಾಧಿಕಾರಿ ತೇಜಸ್ವಿ ಕಟ್ಟಿಮನಿ ಸೇರಿದಂತೆ ಅನೇಕರಿದ್ದರು.

## ಮಗಳ ಮೇಲೆ ಅತ್ಯಾಚಾರ: ತಂದೆಗೆ 20 ವರ್ಷ ಕಠಿಣ ಶಿಕ್ಷೆ

ದಾವಣಗೆರೆ, ಜೂ.1- ಮಗಳ ಮೇಲೆ ಅತ್ಯಾಚಾರವೆಸಗಿದ ತಂದೆಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಎಫ್‌ಟಿಎಸ್‌ಸಿ–1 (ಪೋಕ್ಸೋ ನ್ಯಾಯಾಲಯ) 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಹರಿಹರ ತಾಲ್ಲೂಕಿನ ದುರುಗಪ್ಪ ಶಿಕ್ಷೆಗೊಳಗಾದ ವ್ಯಕ್ತಿ.

ಈತ ಬಾಲಕಿಯಾದ ತನ್ನ ಮಗಳಿಗೆ ತಿಂಡಿ, ಬಟ್ಟೆ ಕೊಡಿಸುತ್ತಾ, ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಅವಳನ್ನು ಹೆದರಿಸಿ ಅತ್ಯಾಚಾರ ಮಾಡುತ್ತಾ ಬಂದಿದ್ದ. ರಾಜ್ಯ ಹೆದ್ದಾರಿಯೊಂದರ ಖಾಲಿ ಜಾಗದಲ್ಲಿ ತಗಡಿನ ಶೀಟ್‌ನಿಂದ ನಿರ್ಮಿಸಿದ ಮನೆಯ ಹಿಂದೆ ಬಾಲಕಿಯ ಮೇಲೆ ಹಲವು ಬಾರಿ ಅತ್ಯಾಚಾರವೆಸಗಿದ್ದ. ಈ ವಿಚಾರವನ್ನು ಯಾರಿಗೂ ತಿಳಿಸದಂತೆ ಬೆದರಿಕೆ ಹಾಕಿದ್ದ. ಈ ಸಂಬಂಧ ಹರಿಹರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವೃತ್ತ ನಿರೀಕ್ಷಕ ಶಿವಪ್ರಸಾದ್ ಎಂ. ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಶ್ರೀಪಾದ ಎನ್. ಅವರು 20 ವರ್ಷಗಳ ಕಠಿಣ ಶಿಕ್ಷೆ 12,000 ದಂಡ ವಿಧಿಸಿದ್ದಾರೆ. ಸಂತ್ರಸ್ತೆಗೆ 5 ಲಕ್ಷ ಪರಿಹಾರವನ್ನು ಸರ್ಕಾರದಿಂದ ನೀಡಬೇಕು ಎಂದು ಆದೇಶ ನೀಡಿದರು.

ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಸುನಂದ ಈಶ್ವರಪ್ಪ ಮಡಿವಾಳರ ಅವರು ಸಾಕ್ಷಿದಾರರ ವಿಚಾರಣೆ ಮಾಡಿದ್ದು, ಕೆ.ಜಿ. ಜಯಪ್ಪ ವಾದ ಮಂಡಿಸಿದ್ದರು.

## ಸೋಲಾರ್ ಪ್ಯಾನಲ್, ಬ್ಯಾಟರಿ ಕಳ್ಳತನ

ದಾವಣಗೆರೆ, ಜೂ. 1- ಕಡರನಾಯಕನಹಳ್ಳಿ ಗ್ರಾಮದ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗದಲ್ಲಿದ್ದ ಸುಮಾರು 45 ಸಾವಿರ ರೂ. ಬೆಲೆ ಬಾಳುವ ಸೋಲಾರ್ ಪೆನಾಲ್, ಬ್ಯಾಟರಿ ಹಾಗೂ ಲೈಟುಗಳು ಕಳ್ಳತನವಾಗಿರುವ ಕುರಿತು ಸಹಾಯಕ ತೋಟಗಾರಿಕೆ ಅಧಿಕಾರಿ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ಅರಿವು, ಆದರ್ಶಗಳ ಬೋಧನೆ ಗುರುವಿನ ಧರ್ಮ

### ಹುಲಿಕೆರೆ ದೊಡ್ಡಮಠದ ಶ್ರೀ ಗುರು ಪಟ್ಟಾಧಿಕಾರ ಮಹೋತ್ಸವಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

ಕಡೂರು, ಜೂ. 1- ಮಾನವೀಯ ಸಂಬಂಧಗಳು ಸಡಿಲಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಅರಿವು, ಆದರ್ಶಗಳನ್ನು ಬೋಧಿಸುವುದರ ಮೂಲಕ ಜಾಗೃತಿಯನ್ನು ಉಂಟು ಮಾಡುವುದೇ ಗುರುವಿನ ಧರ್ಮವಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯ ಪಟ್ಟರು.

ತಾಲ್ಲೂಕಿನ ಹುಲಿಕೆರೆ ದೊಡ್ಡಮಠದ ಶ್ರೀ ಗುರು ಪಟ್ಟಾಧಿಕಾರ ಮಹೋತ್ಸವದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ಅಂತರಂಗ, ಬಹಿರಂಗ ಶುದ್ಧಿಗಾಗಿ ಶ್ರಮಿಸುವುದೇ ಎಲ್ಲ ಧರ್ಮಗಳ ಮೂಲ ಗುರಿಯಾಗಿದೆ. ವಿಶ್ವ ಬಂಧುತ್ವ ಸಾರಿದ ವೀರಶೈವ ಧರ್ಮ ಸಕಲ ಜೀವಾತ್ಮರಿಗೆ ಒಳಿತನ್ನೇ ಬಯಸುತ್ತಾ ಬಂದಿದೆ. ಆಸೆ, ಆಮಿಷಗಳಿಲ್ಲದ ಜೀವನ ಶಾಂತಿ, ನೆಮ್ಮದಿಗೆ ಮೂಲವಾಗಿದೆ. ಹುಲಿಕೆರೆ ದೊಡ್ಡಮಠದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಸಕಲ ಸದ್ಭಕ್ತರ ಪ್ರೀತಿ, ವಿಶ್ವಾಸಗಳನ್ನು ಗಳಿಸಿಕೊಂಡು ಶ್ರೀ ಮಠದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ.



ತಮ್ಮ ಉತ್ತರಾಧಿಕಾರಿಯನ್ನು ಗುರುತಿಸಿ, ಇಂದು ವಿಧ್ಯುಕ್ತವಾಗಿ ಶ್ರೀ ಗುರು ಪಟ್ಟಾಧಿಕಾರ ಅನುಗ್ರಹಿಸಿರುವುದು ಸಂತೋಷ ತಂದಿದೆ ಎಂದರು.

ಯಡಿಯೂರು ಕ್ಷೇತ್ರದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಧರ್ಮ ಜಾಗೃತಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಮಾಜಿ ಶಾಸಕ ಬೆಳ್ಳಿ ಪ್ರಕಾಶ್ 'ದಿವ್ಯ ಪ್ರಭೆ' ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು. ಮಹಡಿ ಮನೆ ಸತೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ನೇತೃತ್ವ ವಹಿಸಿದ್ದ ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ವೀರಶೈವ ಧರ್ಮದಲ್ಲಿ ಗುರುವಿನ ಪಾತ್ರ ಬಹಳಷ್ಟು ಮಹತ್ವವಾದದ್ದು. ಶ್ರೀ ಮಠದ ಪರಂಪರೆ ಮತ್ತು ಪರಮಾಚಾರ್ಯರ ಆಶೀರ್ವಾದ ಬಲದಿಂದ ಎಲ್ಲಾ ಕಾರ್ಯಗಳು ವಿಜೃಂಭಣೆಯಿಂದ ಜರುಗಿದ್ದು ತಮಗೆ ಸಂತೋಷ ತಂದಿದೆ ಎಂದರು.

# ಲೈಂಗಿಕ ಕಿರುಕುಳ: ಎಐವೈಎಫ್ ಪ್ರತಿಭಟನೆ

ದಾವಣಗೆರೆ, ಜೂ. 1- ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಸದ ಬ್ರಿಜ್ ಭೂಷಣ್ ಶರಣ್ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ಅಖಿಲ ಭಾರತ ಯುವಜನ ಫೆಡರೇಷನ್ ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು




ಸಮಿತಿಯ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿ, ದೇಶಕ್ಕೆ ಪದಕವನ್ನು ತಂದು ಕೊಟ್ಟ ಕ್ರೀಡಾಪಟುಗಳ ವಿಚಾರದಲ್ಲಿಯೇ ಈ ರೀತಿ ನಿರ್ಲಕ್ಷ್ಯ ವಹಿಸಿದರೆ, ಇನ್ನು ಸಾಮಾನ್ಯರ ಗತಿ ಏನು ? 'ಬೇಟಿ ಬಚಾವೋ' ಎಂಬುದು ಕೇವಲ ಬಾಯಿ ಮಾತಾಗಬಾರದು. ದೇಶದ ಹೆಣ್ಣು ಮಕ್ಕಳು ಲೈಂಗಿಕ ಕಿರುಕುಳದ ಆರೋಪ ಮಾಡಿ ದೆಹಲಿಯ ಬೀದಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದರೆ, ಕೇಂದ್ರ ಸರ್ಕಾರ ಕಣ್ಣು-ಕಿವಿ ಮುಚ್ಚಿಕುಳಿತುಕೊಳ್ಳುವ ಮೂಲಕ ಹೆಣ್ಣು ಮಕ್ಕಳನ್ನು ಅವಮಾನಿಸುತ್ತಿದೆ ಎಂದು ದೂರಿದರು.

ಆರೋಪಿ ಬ್ರಿಜ್ ಭೂಷಣ್ ತಮ್ಮದೇ ಪಕ್ಷದ ಸಂಸದನಾಗಿರುವುದರಿಂದ, ಕ್ರಮ ಕೈಗೊಳ್ಳಲು ಮುಂದಾಗದಿರುವ ಕೇಂದ್ರದ ನಡೆ ಖಂಡನೀಯ. ಕೂಡಲೇ ಫೆಡರೇಷನ್ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ತನಿಖೆ ನಡೆಸಿ ಕ್ರಮಕ್ಕೆ ಮುಂದಾಗಬೇಕು ಎಂದು ವಾಸು ಒತ್ತಾಯಿಸಿದರು

ಈ ಸಂದರ್ಭದಲ್ಲಿ ರಾಜು ಕೆರೆಯಾಗಳಹಳ್ಳಿ, ಎ. ತಿಪ್ಪೇಶ್, ಗುರುಮೂರ್ತಿ ಸಿ., ಫಜುಲ್, ಹನುಮಂತಪ್ಪ ನಿಟುವಳ್ಳಿ, ಎಕೆ ಹಟ್ಟಿ ಜೀವನ್ ನಿಟ್ಟುವಳ್ಳಿ, ನಿಟುವಳ್ಳಿ ರಾಜು, ಅರುಣಾ, ನಿಂಗರಾಜು, ಹನುಮಂತಪ್ಪ ಯರವನಾಗತಿಹಳ್ಳಿ ಉಪಸ್ಥಿತರಿದ್ದರು.

# ಬೆಂಬಲ ಬೆಲೆಗೆ ಸುಗ್ರಿವಾಜ್ಞೆ ಹೊರಡಿಸಲು ಒತ್ತಾಯ

ಜಗಳೂರು, ಜೂ. 1- ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ರಾಜ್ಯ ಸುಗ್ರೀವಾಜ್ಞೆ ಹೊರಡಿಸಿ ರಾಜ್ಯಮಟ್ಟದಲ್ಲಿ ಎಂ.ಎಸ್.ಪಿ.ಗೆ ಕಾಯ್ದೆ ಜಾರಿಗೆ ತರುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕು ಘಟಕದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಗೆ ಮನವಿ ಸಲ್ಲಿಸಿದರು.


ಜಗಳೂರಿನಲ್ಲಿ ರೈತರಿಂದ ಪ್ರತಿಭಟನೆ

ಬುಧವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಹೋರಾಟ ರೈತ ಸಂಘದ ಪದಾಧಿಕಾರಿಗಳು ಮತ್ತು ರೈತರು ಬೃಹತ್ ಪ್ರತಿಭಟನೆಯ ಮೂಲಕ ಗಾಂಧಿ ವೃತ್ತ, ಹೊಸ ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ನಿರ್ಮಿಸಿ, ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಚೇರಿಗೆ ಆಗಮಿಸಿ ಕಚೇರಿಯ ಗೇಟ್‌ನ ಬಾಗಿಲು ಮುಚ್ಚಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ಸುಗ್ರೀವಾಜ್ಞೆ ಹೊರಡಿಸಿ, ರಾಜ್ಯಮಟ್ಟದಲ್ಲಿ ಎಂ.ಎಸ್.ಪಿ.ಗೆ ಕಾಯ್ದೆಯನ್ನು ಜಾರಿಗೆ ತರಬೇಕು. ಇದರಿಂದ ರೈತರು ಬೆಳೆದ ಬೆಳಗಳಿಗೆ ಸ್ವಲ್ಪ ಅನುಕೂಲ ಆಗಲಿದೆ ಎಂದರು.

ಈ ಕಾಯ್ದೆಯನ್ನು ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿ ಮಾಡಿದ ಖರೀದಿದಾರರಿಗೆ ಕನಿಷ್ಠ 6 ರಿಂದ 1 ವರ್ಷ ಜೈಲು ಹಾಗೂ ದಂಡ ಮತ್ತು ಪರವಾನಿಗೆ ರದ್ದು ಎಂಬ ಕಾನೂನನ್ನು ಜಾರಿಗೆ ತರಬೇಕು. ಕೇಂದ್ರ ಸರ್ಕಾರವು ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ರಾಜ್ಯ ಸರ್ಕಾರವು ಬೋನಸ್ ರೂಪದಲ್ಲಿ ಸಹಾಯಧನ ಸೇರಿಸಿ ಬೆಂಬಲ ಬೆಲೆಯನ್ನು ರಾಜ್ಯ ಸರ್ಕಾರ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಹಳ ವರ್ಷಗಳ ಹಿಂದೆ (ಬಿಪಿಎಲ್) ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳ ಗುರುತಿಸುವ ಮಾನ ದಂಡಗಳನ್ನು ರೂಪಿಸುತ್ತಾ, ಅದರಲ್ಲಿ ಮೊಬೈಲ್, ಮೋಟರ್‌ಬೈಕ್, ಟಿ.ವಿ. ಇರುವ ಆಗಿರಲಿಲ್ಲ. ಆದರೆ ಕಾಲ ಬದಲಾಗಿದೆ. ಬಿಪಿಎಲ್ ಕುಟುಂಬಗಳು ಟಿ.ವಿ. ಮೊಬೈಲ್, ಮೋಟರ್ ಸೈಕಲ್, ಜಮೀನು ಹೊಂದಿರುತ್ತಾರೆ. ಆದ್ದರಿಂದ ಸರ್ಕಾರವು ಬಿಪಿಎಲ್ ಕುಟುಂಬಗಳ ಮಾನದಂಡವನ್ನು ಬದಲಾಯಿಸಬೇಕು ಎಂದು ಆಗ್ರಹಿಸಿದರು.

ಅಕಾಲಿಕ ಮಳೆಗೆ ಹಾಗೂ ಸಿಡಿಲಿಗೆ ಬೆಳೆ ಮತ್ತು ಜೀವ ಹಾನಿ ಆಗುತ್ತಿದೆ. ಆದರೆ, ಸರ್ಕಾರದ ಅಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಇದುವರೆಗೂ ಬಂದಿಲ್ಲ ಮತ್ತು ವೈಜ್ಞಾನಿಕ ಪರಿಹಾರ ನೀಡಿಲ್ಲ. ಆದ್ದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಕ್ಷಣ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಲ್ಲನಹೊಳೆ ಚಿರಂಜೀವಿ ಮಾತನಾಡಿ, ರಾಜ್ಯ ಸರ್ಕಾರವು ಕನಿಷ್ಠ ಬೆಂಬಲ ಬೆಲೆಗೆ ರಾಜ್ಯ ಮಟ್ಟದಲ್ಲಿ ಕಾಯ್ದೆಗಳನ್ನು ಜಾರಿಗೆ ತರಬೇಕು. ಎಪಿಎಂಸಿ ಕಾಯ್ದೆಯನ್ನು ಬಲಪಡಿಸಬೇಕು ಹಾಗೂ ಎಪಿಎಂಸಿ ಚುನಾವಣೆ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾನನಕಟ್ಟೆ ತಿಪ್ಪೇಸ್ವಾಮಿ, ಶರಣಪ್ಪ, ತಿಪ್ಪೇಸ್ವಾಮಿ, ಅಂಜಿನಪ್ಪ, ಚಂದ್ರಪ್ಪ, ಸತೀಶ್, ನಿಂಗಪ್ಪ, ಸೂರಪ್ಪ. ಗುರುಸಿದ್ದಾಪುರ ತಿಪ್ಪೇಸ್ವಾಮಿ, ಗೋಗುದ್ದು ಬಸವರಾಜ್, ಮೇಘನಾಥ್, ನಾಗರಾಜ್, ಸಹದೇವರೆಡ್ಡಿ ಸೇರಿದಂತೆ ಮತ್ತಿತರರು ಹಾಜರಿದ್ದರು.

## ಮೊಬೈಲ್ ಸುಲಿಗೆ ಮೂವರ ಬಂಧನ

ದಾವಣಗೆರೆ, ಜೂ.1- ಬೈಕಿನಲ್ಲಿ ಬಂದು ವ್ಯಕ್ತಿಯೊಬ್ಬರನ್ನು ಅಡ್ಡ ಹಾಕಿ ಮೊಬೈಲ್ ಸುಲಿಗೆ ಮಾಡಿದ್ದ ಮೂವರನ್ನು ಬಂಧಿಸಿರುವ ಪೊಲೀಸರು ಅವರಿಂದ 15 ಸಾವಿರ ಬೆಲೆಯ ಒಂದು ಮೊಬೈಲ್, ಕೃತ್ಯಕ್ಕೆ ಬಳಸಿದ 20 ಸಾವಿರ ರೂ. ಮೌಲ್ಯದ ಬೈಕನ್ನು ವಶಪಡಿಸಿಕೊಂಡಿದ್ದಾರೆ. ಹಣ್ಣಿನ ವ್ಯಾಪಾರಿ ತೋಹಿದ್ (27), ಪ್ಲಂಬರ್ ಕೆಲಸ ಮಾಡುವ ಅಮಾನುಲ್ಲಾ (22) ಹಾಗೂ ಹಣ್ಣಿನ ವ್ಯಾಪಾರಿ ಫರೋಜ್ ಅಹ್ಮದ್ (22) ಬಂಧಿತರು. ಕಳೆದ ಏಪ್ರಿಲ್ 22ರಂದು ಹರಿಹರದ ನಟರಾಜ್ ಚಿತ್ರದುರ್ಗದಿಂದ ಹರಿಹರಕ್ಕೆ ತನ್ನ ಬೈಕ್‌ನಲ್ಲಿ ಬರುವಾಗ ರಾತ್ರಿ 10.20 ಕ್ಕೆ ಹೆಚ್. ಕಲ್ಪನಹಳ್ಳಿ ಬಳಿ ಅಪೂರ್ವ ಹೋಟೆಲ್ ಹತ್ತಿರ ಬೈಕ್‌ನಲ್ಲಿ ಮೂರು ಜನರು ಬಂದು ಬೈಕ್ ಅಡ್ಡ ಹಾಕಿ ಮೊಬೈಲ್ ಸುಲಿಗೆ ಮಾಡಿಕೊಂಡು ಹೋಗಿದ್ದರು. ಈ ಬಗ್ಗೆ ಅವರು ಪ್ರಕರಣ ದಾಖಲಿಸಿದ್ದರು. ಆರೋಪಿತರ ಪತ್ತೆ ಕಾರ್ಯದಲ್ಲಿ ಯಶಸ್ವಿಯಾದ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿ ಪಿಐ ಲಿಂಗನಗೌಡ ನೆಗಳೂರು, ಪಿ.ಎಸ್.ಐ ಎ.ಆರ್.ಮುಂದಿನಮನಿ, ಎ.ಎಸ್.ಐ ಗುರುಶಾಂತಯ್ಯ, ಸಿಬ್ಬಂದಿಗಳಾದ ದೇವೇಂದ್ರನಾಯ್ಕ, ಅಣ್ಣಯ್ಯ, ಮಹಮ್ಮದ್ ಯೂಸೂಫ್ ಅತ್ತಾರ್, ಅನಿತಾಬಾಯಿ ಅವರನ್ನು ಎಸ್ಪಿ ಡಾ. ಅರುಣ್ ಕೆ. ಪ್ರಶಂಸಿಸಿದ್ದಾರೆ.

## 'ವಿಶ್ವ ತಂಬಾಕು ರಹಿತ ದಿನ' : ಜನ ಜಾಗೃತಿ




ದಾವಣಗೆರೆ, ಜೂ. 1- ವಿಶ್ವ ತಂಬಾಕು ರಹಿತ ದಿನದ ಪ್ರಯುಕ್ತ ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಬೇವಿನಹಳ್ಳಿ, ದೊಡ್ಡ ತಾಂಡಾ ಗ್ರಾಮಸ್ಥರಿಗೆ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜನ ಜಾಗೃತಿ ಕಾರ್ಯಕ್ರಮ ಮತ್ತು ಉಚಿತ ದಂತ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು. ಕಾರ್ಯ ಕ್ರಮದಲ್ಲಿ ಡಾ.ಸಪ್ನಾ ಬಿ, ಡಾ. ಉಷಾ ಜಿ.ವಿ, ಡಾ. ಸಂಗೀತ ಸಿದ್ದಬಸಪ್ಪ, ಡಾ. ಶುಭ .ಸಿ ಇದ್ದರು.

## ಲಯನ್ಸ್ ಹಿರಿಯ ಪ್ರಾಥಮಿಕ ಶಾಲೆ ಪ್ರಾರಂಭ



ಮಲೇಬೆನ್ನೂರು ಜೂ. 1 - ಇಲ್ಲಿನ ಲಯನ್ಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2023-24 ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ವೇಳೆ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ ಸ್ವಾಗತ ಕೋರಲಾಯಿತು. ಈ ವೇಳೆ ವಿದ್ಯಾರ್ಥಿಗಳಿಗೆ ಸರ್ಕಾರ ಕೊಡಮಾಡುವ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು. ಲಯನ್ಸ್ ಕ್ಲಬ್ ಅಧ್ಯಕ್ಷ ಎನ್. ಜಿ. ಶಿವಾಜಿ ಪಾಟೀಲ್, ಲಯನ್ಸ್ ವಿದ್ಯಾಸಂಸ್ಥೆ ಅಧ್ಯಕ್ಷ ಬಿ. ಚಿದಾನಂದಪ್ಪ, ಓ. ಜಿ. ರುದ್ರಗೌಡ್ರು, ಹೆಚ್ . ಜಿ. ಚಂದ್ರಶೇಖರ್, ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ್ ಸೇರಿದಂತೆ ಸಹ ಶಿಕ್ಷಕರು ಈ ಸಂದರ್ಭದಲ್ಲಿ ಹಾಜರಿದ್ದರು.

# ತಂಬಾಕು ಬೆಳೆವ ರೈತರಿಗೆ ಪರ್ಯಾಯ ಬೆಳೆಗೆ ಪ್ರೋತ್ಸಾಹ ಅಗತ್ಯ



### ವಿಶ್ವ ತಂಬಾಕು ರಹಿತ ದಿನದ ಜಾಥಾಕ್ಕೆ ಚಾಲನೆ ನೀಡಿದ ನ್ಯಾ.ರಾಜೇಶ್ವರಿ ಎನ್. ಹೆಗಡೆ

ದಾವಣಗೆರೆ, ಜೂ. 1- ತಂಬಾಕು ಬೆಳೆಯುವ ರೈತರಿಗೆ ಪರ್ಯಾಯ ಬೆಳೆ ಬೆಳೆಯಲು ಪ್ರೋತ್ಸಾಹ ನೀಡಬೇಕಿದೆ. ಜೊತೆಗೆ ತಂಬಾಕಿನಿಂದ ಆಗುವ ದುಷ್ಪರಿಣಾಮಗಳ ಬಗ್ಗೆಯೂ ವಿವರಿಸಬೇಕಿದೆ ಎಂದು ದಾವಣಗೆರೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಹೇಳಿದರು.

ನಗರದ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ತಂಬಾಕು ರಹಿತ ದಿನದ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲಿ ಶೇ.22ರಷ್ಟು ಯುವ ಜನತೆ ತಂಬಾಕು ವ್ಯಸನಿಗಳಾಗಿದ್ದು, ವಿವಿಧ ಚಟಗಳಿಗೆ ದಾಸರಾಗಿದ್ದಾರೆ. ವ್ಯಸನ ಮುಕ್ತ ಸಮಾಜ ನಿರ್ಮಾಣ ನಮ್ಮೆಲ್ಲರ ಹೊಣೆಗಾರಿಕೆ ಆಗಿದೆ. ಈ ಬಗ್ಗೆ ಹೆಚ್ಚು ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಿಸಿದರು.

ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಡಾ.ಜಿ.ಡಿ.ರಾಘವನ್ ಮಾತನಾಡುತ್ತಾ, ರಾಜ್ಯದಲ್ಲಿ ಶೇಕಡ 51.7ರಷ್ಟು ತಂಬಾಕು ವ್ಯಸನಿಗಳಿದ್ದು ಮತ್ತು ಶೇಕಡ 63.9 ರಷ್ಟು ಹೊಗೆರಹಿತ ತಂಬಾಕು ಬಳಕೆದಾರರಿದ್ದಾರೆ. ಇವರಿಗೆ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ, ತಂಬಾಕು ತ್ಯಜಿಸುವಂತೆ ಇಲಾಖೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ನಾಗರಾಜ್ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಎಂ. ಕರೆಣ್ಣವರ್, ದಾವಣಗೆರೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್ ಕುಮಾರ್, ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ.ಎಸ್.ಸುಭಾಷ್ ಚಂದ್ರ, ಶಿವನಕೆರೆ ಬಸವಲಿಂಗಪ್ಪ ಸೇರಿದಂತೆ ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗು ಇತರರು ಇದ್ದರು.


## ಪುರಸಭಾ ಕಾರ್ಯಾಲಯ

ಹರಪನಹಳ್ಳಿ, ವಿಜಯನಗರ ಜಿಲ್ಲೆ, ದೂರವಾಣಿ : 08398 280258
itstaff_ulb_harapanahalli@yashoo.com

ಕ್ರ.ಸಂ.ಪುಸಃ ಹಹಳ್ಳಿ:ಕಂ.ಶಾ/ಇ-ಆಸ್ತಿ/ಸಿಆರ್/2023-24, ದಿನಾಂಕ : 01.06.2023

### ಸಾರ್ವಜನಿಕ ಪ್ರಕಟಣೆ

ಪುರಸಭಾ ವ್ಯಾಪ್ತಿಯ 06ನೇ ವಾರ್ಡ್, ಬ್ರೂಸ್‌ಪೇಟೆ ವ್ಯಾಪ್ತಿಯಲ್ಲಿನ ಡೋರ್ ನಂಬರ್ : 191/980/1 ವುಳ್ಳ ಆರ್.ಸಿಸಿ ಕಟ್ಟಡದ ಮಾಲೀಕರಾದ ಶ್ರೀಮತಿ ವೈ. ವೀರಮ್ಮ ಕೋಂ.ವೈ. ಗುರುಬಸವರಾಜ ಇವರ ಹೆಸರಿನಲ್ಲಿರುವ ಷೆಡ್ಯೂಲ್ ಸ್ವತ್ತಿಗೆ ಇ-ಖಾತಾ ನಕಲು ಕೋರಿ, ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ ಕಛೇರಿಯ ಎಂ.ಎ.ಆರ್.-19 ವಹಿಗಳಲ್ಲಿ ಮತ್ತು ಚಾಲ್ತಿ ವಹಿಯಲ್ಲಿ ಪ್ರಸ್ತಾವಿತ ಸ್ವತ್ತಿನ ಅಳತೆಯು ದಾಖಲಿರುವುದಿಲ್ಲ.

ಮುಂದುವರೆದು, ಅರ್ಜಿದಾರರ ಕೋರಿಕೆಯಂತೆ ಪ್ರಸ್ತಾವಿತ ಸ್ವತ್ತಿನ ಅಳತೆಗೆ ಸಂಬಂಧಿಸಿದಂತೆ ಯಾವುದೇ ನೋಂದಾಯಿತ ದಾಖಲೆಗಳು ಇಲ್ಲದ ನಿಮಿತ್ತ ಅರ್ಜಿದಾರರ ಕೋರಿಕೆಯಂತೆ ಅಕ್ಕ-ಪಕ್ಕದವರ ಸಮಕ್ಷಮದಲ್ಲಿ ಸ್ಥಳ ಪರಿಶೀಲನೆ ಮಾಡಿದ ಸಂದರ್ಭದಲ್ಲಿ ಪೂ-ಪ:23 x ಉ-ದ:62 ಅಡಿಗಳು ಲಭ್ಯವಾಗಿದ್ದು, ಸದರಿ ಲಭ್ಯವಾದ ಅಳತೆಯನ್ನು ದಾಖಲಿಸಿ, ಇ-ಖಾತಾ ನಕಲು ನೀಡಲು ಕ್ರಮವಹಿಸುವ ಬಗ್ಗೆ ಯಾವುದೇ ರೀತಿಯ ಸಿವಿಲ್ ವ್ಯಾಜ್ಯಗಳು/ಆಕ್ಷೇಪಣೆಗಳು/ಸಲಹೆ, ಸೂಚನೆಗಳು ಇದ್ದಲ್ಲಿ ಲಿಖಿತವಾಗಿ ಸಂಬಂಧಿಸಿದ ದಾಖಲೆಗಳೊಂದಿಗೆ ಮುಖ್ಯಾಧಿಕಾರಿಗಳು, ಪುರಸಭೆ ಹರಪನಹಳ್ಳಿ ಇವರ ಹೆಸರಿಗೆ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ 30 ದಿನದೊಳಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆ, ಸೂಚನೆಗಳು ಬಾರದ ಇದ್ದ ಪಕ್ಷದಲ್ಲಿ ಸ್ಥಳದಲ್ಲಿ ಲಭ್ಯವಾದ ಮಾಹಿತಿ ಪ್ರಕಾರ ನಿಯಮಾನುಸಾರ ಕ್ರಮ ವಹಿಸಲಾಗುವುದು.

**ಷೆಡ್ಯೂಲ್ :**

| ಕ್ರ.ಸಂ. | ಡೋರ್ ನಂಬರ್ | ಚೆಕ್ಕುಬಂದಿ | ಸ್ಥಳದಲ್ಲಿ ಲಭ್ಯವಿರುವ ಅಳತೆ |
|---|---|---|---|
| 01 | 191/980/1 | ಪೂರ್ವ ಸಂದು<br>ಪಶ್ಚಿಮ ಜಿಟ್ಟಿನಕಟ್ಟಿ ಮರುಳಸಿದ್ದಪ್ಪ<br>ಉತ್ತರ ರಸ್ತೆ<br>ದಕ್ಷಿಣ ಮಟ್ಟಿ ಬಕ್ಕಣ್ಣ/ಭರ್ಮಪ್ಪನವರ ಮನೆ | ಪೂಪ : 23 x ಉದ 62 ಅಡಿಗಳು |

(ವಿಶೇಷ ಸೂಚನೆ : ಅವಧಿ ಮೀರಿ ಬರುವಂತಹ/ಸ್ವೀಕೃತಗೊಳ್ಳುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ)

ಗೆ, ಕಛೇರಿಯಾ ಸೂಚನಾ ಫಲಕಕ್ಕೆ ಹಾಗೂ ಪತ್ರಿಕಾ ಪ್ರಕಟಣೆಗಾಗಿ

ಸಹಿ/- ಮುಖ್ಯಾಧಿಕಾರಿ
ಪುರಸಭೆ, ಹರಪನಹಳ್ಳಿ.

## ಮಲೇಬೆನ್ನೂರಿನಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ



ಮಲೇಬೆನ್ನೂರು, ಜೂ. 1- ತಂಬಾಕು ಉತ್ಪನ್ನಗಳಿಗೆ ಜನರು ಮಾರು ಹೋಗಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿರುವುದು ವಿಷಾದನೀಯ ಎಂದು ಧರ್ಮಸ್ಥಳ ಯೋಜನೆಯ ಅಖಿಲ ಕರ್ನಾಟಕ ಜನ ಜಾಗೃತಿ ಸಮಿತಿ ಸದಸ್ಯ ಜಿ. ಮಂಜುನಾಥ್ ಪಟೇಲ್ ಕಳವಳ ವ್ಯಕ್ತಪಡಿಸಿದರು.

ಅವರು ಬುಧವಾರ ಪಟ್ಟಣದ ಕಾಳಿಕಾದೇವಿ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿಟ್ಟೂರು ವಲಯದಿಂದ ಹಮ್ಮಿಕೊಂಡಿದ್ದ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ತಂಬಾಕು, ಬೀಡಿ, ಸಿಗರೇಟ್, ಮದ್ಯ, ಗುಟ್ಕಾ, ಗಾಂಜಾ ಮತ್ತಿತರೆ ಮಾದಕ ವಸ್ತು ಸೇವನೆಯಿಂದ ಆರೋಗ್ಯ ಹಾಳಾಗುತ್ತದೆ. ತಂಬಾಕಿನಿಂದ ದೂರವಿದ್ದು, ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮಾತನಾಡಿ, ನಮ್ಮ ಯೋಜನೆ ನಾಗರಿಕ ಸಮಾಜ ಹಾಗೂ ದೇಶದ ಉನ್ನತಿಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸಿದೆ. ಮದ್ಯವರ್ಜನೆ ಶಿಬಿರ ಆಯೋಜಿಸಿ ಕ್ರಾಂತಿ ಮಾಡಿದೆ ಎಂದು ಹೇಳಿದರು.

ಎಸ್.ಬಿ.ಕೆ.ಎಂ. ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಪಶು ವೈದ್ಯಾಧಿಕಾರಿ ಡಾ ಬಾಲಚಂದ್ರ ಅವರು ವಿಶೇಷ ಉಪನ್ಯಾಸ ನೀಡಿದರು. ನಿಟ್ಟೂರು ವಲಯ ಮೇಲ್ವಿಚಾರಕ ಚಂದ್ರಪ್ಪ ಕೊರಕಲಿ, ಜ್ಞಾನ ವಿಕಾಸ ಸಂಯೋಜನಾಧಿಕಾರಿ ಸವಿತಾ, ಕೃಷಿ ಮೇಲ್ವಿಚಾರಕ ಗಂಗಾಧರ್ ಸೇರಿದಂತೆ ಸ್ವ ಸಹಾಯ ಸಂಘಗಳ 150 ಸದಸ್ಯರು ಈ ವೇಳೆ ಇದ್ದರು.

## ಕೊಮಾರನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವ



ಹರಪನಹಳ್ಳಿ, ಜೂ.1- 2023-24 ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ತಾಲ್ಲೂಕಿನ ಕೊಮಾರನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಹೂ ನೀಡುವುದರ ಮೂಲಕ ಶಾಲೆಗೆ ಬರ ಮಾಡಿಕೊಳ್ಳಲಾಯಿತು. ಮುಖ್ಯ ಶಿಕ್ಷಕರಾದ ಶ್ರೀಮತಿ ಜಯಶ್ರೀ, ಸಹ ಶಿಕ್ಷಕಿಯರಾದ ವೈ. ಕೆಂಚಮ್ಮ, ಇಂದಿರಬಾಯಿ, ಶಶಿಕಲಾ ಉಪಸ್ಥಿತರಿದ್ದರು.

## ವಿನೋಬನಗರ ಸ.ಹಿ.ಪ್ರಾ.ಶಾಲಾ ಪ್ರಾರಂಭೋತ್ಸವ

ದಾವಣಗೆರೆ, ಜೂ. 1- ನಗರದ ವಿನೋಬನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಸಲಾಯಿತು. ಶಾಲಾ ಮುಖ್ಯಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಶಾಲಾ ವಿದ್ಯಾರ್ಥಿಗಳಿಗೆ ಆರತಿ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ದಾನಿಗಳಾದ ಟಿ.ಎಸ್. ನಾಗರಾಜ್ ಮಕ್ಕಳಿಗೆ ಸಿಹಿ ವಿತರಿಸಿದರು. ಕಾರ್ಯಕ್ರಮದಲ್ಲಿ ಪೋಷಕರು, ಮುಖ್ಯೋಪಾಧ್ಯಾಯರಾದ ಎಸ್. ಶೋಭಾ ಎಸ್‌ಡಿಎಂಸಿ ಸಮಿತಿಯ ಉಮಾ ಕೆ., ರುದ್ರಪ್ಪ, ಕವಿತ, ಶೃತಿ ಹಾಗೂ ಸಹ ಶಿಕ್ಷಕರು ಉಪಸ್ಥಿತರಿದ್ದರು.

# ದೇಶದ ಆರ್ಥಿಕತೆಗೆ 'ಕಸ-ವರ'ದ ನೆರವು..!

**ಎಸ್.ಎ. ಶ್ರೀನಿವಾಸ್**

ಪ್ರಧಾನ ಮಂತ್ರಿಗಳ ವಿಜ್ಞಾನ, ತಂತ್ರಜ್ಞಾನ ಹಾಗೂ ಆವಿಷ್ಕಾರ ಸಲಹಾ ಮಂಡಳಿ (ಪಿ.ಎಂ.-ಎಸ್.ಟಿ.ಐ.ಎ.ಸಿ.) ಮುಂದಿನ ತಾಂತ್ರಿಕ ಮೈಲಿಗಲ್ಲುಗಳಿಗೆ ನೀಲನಕ್ಷೆ ರೂಪಿಸಿದೆ. ಅದರಲ್ಲಿ ಕ್ವಾಂಟಂ ವಿಜ್ಞಾನ, ಕೃತಕ ಬುದ್ಧಿವಂತಿಕೆ, ಮಾನವ ಆರೋಗ್ಯಕ್ಕೆ ಜೈವಿಕ ವಿಜ್ಞಾನ ಇತ್ಯಾದಿಗಳೆಲ್ಲ ಇವೆ. ಇದರ ಜೊತೆಗಿರುವ ಮತ್ತೊಂದು ವಿಷಯ ಎಂದರೆ 'ಕಸ ಸಂಪತ್ತು'!

ಹಳೆಗನ್ನಡದಲ್ಲಿ ಬಂಗಾರವನ್ನು ಕಸವರ ಎಂದೂ ಕರೆಯಲಾಗುತ್ತಿತ್ತು. ಬಹುಶಃ ಮುಂದೊಂದು ದಿನ ಕಸವೂ ಬಂಗಾರವಾಗುವ ಕಾಲ ಬರಬಹುದು ಎಂಬುದು ಆಗಿನವರ ಆಶಯವಾಗಿತ್ತೋ ಏನೋ. ಪ್ರಸಕ್ತ ಭಾರತದಲ್ಲಿ ಕಸ ಇನ್ನೂ ವರವಾಗಿಲ್ಲ, ಹೊರೆಯಾಗಿದೆ. ಆದರೆ, ಸ್ವೀಡನ್ ರೀತಿಯ ದೇಶಗಳು ಕಸವನ್ನು ವರ ಮಾಡಿಕೊಳ್ಳುವತ್ತ ಈಗಾಗಲೇ ಸ್ಪಷ್ಟ ಹೆಜ್ಜೆ ಇಟ್ಟಿವೆ.

ವಿಶ್ವದಾದ್ಯಂತ ಕಸವನ್ನು ವಿಲೇವಾರಿ ಮಾಡುವುದು ಹೇಗೆ ಎಂಬ ಚಿಂತೆ ಕಾಡುತ್ತಿದ್ದರೆ, ಸ್ವೀಡನ್ 2016ರಲ್ಲಿ ಕಸದ ರಾಶಿ ಇಲ್ಲದೇ ಪರದಾಡಿತ್ತು! ಏನಾಯಿತು ಎಂದರೆ, ಸ್ವೀಡನ್ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕಗಳನ್ನು ಹೊಂದಿತ್ತು. ತ್ಯಾಜ್ಯದಿಂದ ಇಂಧನ ಉತ್ಪಾದಿಸುವ 32 ಘಟಕಗಳು ಕಾರ್ಯನಿರ್ವಹಿಸುತ್ತಿದ್ದವು. ದೇಶದ ಶೇ.9ರಷ್ಟು ಮನೆಗಳಿಗೆ ಈ ಘಟಕದಿಂದಲೇ ವಿದ್ಯುತ್ ಬರುತ್ತಿತ್ತು.

ಹೀಗಾಗಿ ಅಲ್ಲಿನ ಸಾಕಷ್ಟು ಇಂಧನ ಅಗತ್ಯಕ್ಕೆ ಕಸವೇ ಆಧಾರವಾಗಿತ್ತು. ಆದರೆ, ತ್ಯಾಜ್ಯ ನಿರ್ವಹಣೆಯನ್ನು ಆ ದೇಶ ಎಷ್ಟರ ಮಟ್ಟಿಗೆ ಪಾಲಿಸಿತ್ತು ಎಂದರೆ, ಅಲ್ಲಿನ ವಿದ್ಯುತ್ ಘಟಕಗಳಿಗೆ ಕಸದ ಕೊರತೆಯಾಗಿತ್ತು. ಕೊನೆಗೆ ಬೇರೆ ದೇಶಗಳಿಂದ ಕಸ ಆಮದು ಮಾಡಿಕೊಂಡು ಪರಿಸ್ಥಿತಿ ನಿಭಾಯಿಸಲಾಯಿತು.

ಸ್ವೀಡನ್ 2015ರ ವೇಳೆಗಾಗಲೇ ಮನೆಗಳಿಂದ ಶೇ.99ರಷ್ಟು ಘನತ್ಯಾಜ್ಯವನ್ನು ಮರುಬಳಕೆ ಮಾಡಿಕೊಳ್ಳುತ್ತಿತ್ತು. ಈಗ ಸ್ವೀಡನ್ ಮತ್ತಷ್ಟು ಮುಂದೆ ಸಾಗಿದೆ. ಬಳಕೆಯಾಗುವ ಎಲ್ಲ ವಸ್ತುಗಳನ್ನು ಹೇಗಾದರೂ ಮಾಡಿ ಮರು ಬಳಕೆ ಹಂತಕ್ಕೆ ತರಬೇಕು ಎಂದು ದೇಶ ಶ್ರಮಿಸುತ್ತಿದೆ. ಅದರ ಅಂಗವಾಗಿ, ಹಳೆಯ ಬಟ್ಟೆಗಳಿಂದ ನೂಲು ಬೇರ್ಪಡಿಸಿ, ಹೊಸ ಬಟ್ಟೆ ಮಾಡಲಾಗುತ್ತಿದೆ.





ಈ ಎಲ್ಲ ಹಿನ್ನೆಲೆ ನೋಡಿದಾಗ, ಭಾರತದ ಪ್ರಧಾನ ಮಂತ್ರಿ ಸಮಿತಿಯು ತ್ಯಾಜ್ಯದಿಂದ ಸಂಪತ್ತು ಎಂಬ ಗುರಿ ಹೊಂದಿರುವುದರಲ್ಲಿ ಅಚ್ಚರಿ ಪಡಬೇಕಿಲ್ಲ. ಹಳೆಯ ಆರ್ಥಿಕತೆಯಲ್ಲಿ ಕಚ್ಚಾ ವಸ್ತುಗಳನ್ನು ಉತ್ಪನ್ನಗಳಾಗಿ ಪರಿವರ್ತಿಸಿ ಬಿಸಾಕಲಾಗುತ್ತಿತ್ತು. ಇದು ಒಮ್ಮುಖ ಚಲನೆಯಾಗಿತ್ತು. ಈಗ ಒಂದು ವಸ್ತುವನ್ನು ಮತ್ತೆ ಮತ್ತೆ ಮರು ಬಳಕೆ ಮಾಡುವ ಚಕ್ರ ರೂಪದ ಆರ್ಥಿಕತೆ ಬೇಕೆಂಬ ಬೇಡಿಕೆ ಹೆಚ್ಚಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಲಿಥಿಯಂ ಬ್ಯಾಟರಿ, ಇ - ತ್ಯಾಜ್ಯ, ಕೈಗಾರಿಕಾ ತ್ಯಾಜ್ಯ, ಗುಜರಿ ಲೋಹ, ರಬ್ಬರ್, ಹಳೆ ವಾಹನ, ಜಿಪ್ಸಮ್, ಸೌರ ಫಲಕ ಹಾಗೂ ನಗರ ಸಂಸ್ಥೆಗಳ ತ್ಯಾಜ್ಯಗಳನ್ನು ಉತ್ಪನ್ನಗಳಾಗಿ ಪರಿವರ್ತಿಸುವ ಗುರಿ ಹೊಂದಲಾಗಿದೆ.

ಅಂದ ಹಾಗೆ, ಈ ಇಡೀ ಪ್ರಕ್ರಿಯೆ ಲಾಭದಾಯಕವಷ್ಟೇ ಅಲ್ಲದೇ ಸಾಕಷ್ಟು ಜನರಿಗೆ ಉದ್ಯೋಗ ಒದಗಿಸುವಂಥದ್ದೂ ಆಗಿದೆ. 2025ರ ವೇಳೆಗೆ ಭಾರತದ ತ್ಯಾಜ್ಯ ವಿಲೇವಾರಿ ವಲಯ 14 ಶತಕೋಟಿ ಡಾಲರ್‌ಗಳಿಗೆ ತಲುಪುವ ಸಾಧ್ಯತೆ ಇದೆ. ಈಗಾಗಲೇ ನಗರ ಪಾಲಿಕೆಗಳಿಂದ ಪ್ರತಿ ವರ್ಷ 62 ದಶಲಕ್ಷ ಟನ್‌ಗಳ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ.

ಭಾರತ ನಿರುದ್ಯೋಗದ ತೀವ್ರ ಸಮಸ್ಯೆಯನ್ನು ಎದುರಿಸುತ್ತಿದೆ. ಚಕ್ರ ಮಾದರಿಯ ಆರ್ಥಿಕತೆಯಿಂದ ನಿರುದ್ಯೋಗ ಸಮಸ್ಯೆ ಬಗೆಹರಿಸಲು ತುಸು ನೆರವು ಸಿಗಲಿದೆ. ದಿ ಗ್ಲೋಬಲ್ ಕ್ಲೈಮೇಟ್ ಆಕ್ಷನ್ ಸಮ್ಮಿಟ್ ವರದಿಯ ಪ್ರಕಾರ, ವೃತ್ತ ಮಾದರಿಯ ಆರ್ಥಿಕತೆಯಿಂದ 2030ರ ವೇಳೆಗೆ 65 ದಶಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ. ಈ ದೃಷ್ಟಿಯಿಂದಲೂ ಕಸವು ವರವಾಗಬಹುದಾಗಿದೆ.

ಆದರೆ, ಈ ಕಸವನ್ನು ಸಂಪತ್ತನ್ನಾಗಿ ಮಾಡುವಲ್ಲಿ ಭಾರತ ಸಾಗುವ ದಾರಿ ಇನ್ನೂ ದೂರವಿದೆ. ತ್ಯಾಜ್ಯ ಕಡಿಮೆ ಮಾಡುವ, ಮರು ಬಳಕೆ ಸಂಪನ್ಮೂಲವನ್ನು ಗರಿಷ್ಠಗೊಳಿಸುವ ಹಾಗೂ ನಿರಂತರವಾಗಿ ಮರು ಬಳಕೆ ಮಾಡುವ ಚಕ್ರ ರೀತಿಯ ಆರ್ಥಿಕತೆ ಸದ್ಯಕ್ಕಿನ್ನೂ ಕನಸಾಗಿದೆ.

ಉಕ್ರೇನ್ - ರಷ್ಯಾ ಸಮರದ ಅವಧಿಯಲ್ಲಿ ಪೆಟ್ರೋಲ್ ಉತ್ಪನ್ನಗಳ ಬೆಲೆ ಅತೀವ ಏರಿಕೆಯಾಗಿ ವಿಶ್ವದ ಆರ್ಥಿಕತೆಯೆಲ್ಲ ತಳಮಳಕ್ಕೆ ಸಿಲುಕಿವೆ. ಆದರ ಹೊಡೆತ ಭಾರತದ ಮೇಲೂ ಬಿದ್ದು, ಹಣದುಬ್ಬರ ತೀವ್ರವಾಗಿತ್ತು. ಭಾರತ ಇಂಧನಕ್ಕಾಗಿ ಬೇರೆ ದೇಶಗಳನ್ನು ಅವಲಂಬಿಸಿದೆ. ಹೀಗಿರುವಾಗ ಮತ್ತೆ ಮತ್ತೆ ಉಕ್ರೇನ್ ರೀತಿಯ ಪರಿಸ್ಥಿತಿ ಎದುರಾಗದೇ ಇರದು.

ಭಾರತವನ್ನು ನಿಜವಾದ ಸ್ವಚ್ಛ ಭಾರತ ಮಾಡಬೇಕಾದರೆ ಈ ವಲಯದಲ್ಲಿ ಸಾಕಷ್ಟು ಅನ್ವೇಷಣೆಗಳು, ಹೂಡಿಕೆ ಹಾಗೂ ಉದ್ಯೋಗಾವಕಾಶಗಳು ಸೃಷ್ಟಿಯಾಗಬೇಕಿದೆ. ಆಗ ನಿಜವಾಗಿಯೂ ಭಾರತಕ್ಕೆ 'ಕಸ-ವರ' ಸಿಗಲಿದೆ.

> ಹಳೆಯ ಆರ್ಥಿಕತೆಯಲ್ಲಿ ಕಚ್ಚಾ ವಸ್ತುಗಳನ್ನು ಉತ್ಪನ್ನಗಳಾಗಿ ಪರಿವರ್ತಿಸಿ ಬಿಸಾಕಲಾಗುತ್ತಿತ್ತು. ಇದು ಒಮ್ಮುಖ ಚಲನೆಯಾಗಿತ್ತು. ಈಗ ಒಂದು ವಸ್ತುವನ್ನು ಮತ್ತೆ ಮತ್ತೆ ಮರು ಬಳಕೆ ಮಾಡುವ ಚಕ್ರ ರೂಪದ ಆರ್ಥಿಕತೆ ಬೇಕೆಂಬ ಬೇಡಿಕೆ ಹೆಚ್ಚಾಗುತ್ತಿದೆ.

# ಮೇಕೆದಾಟಿಗೆ ತಮಿಳುನಾಡು ಸಹಕಾರ ನೀಡಲಿ

ಬೆಂಗಳೂರು, ಜೂ. 1 - ಸಮುದ್ರಕ್ಕೆ ಹರಿದು ಹೋಗುವ ನೀರು ತಡೆದು ಕಾವೇರಿ ಭಾಗದ ಜನರ ಬಳಕೆಗೆ ಅವಕಾಶ ಮಾಡಿಕೊಡಲು ಕೈಗೆತ್ತಿಕೊಂಡಿರುವ ಮೇಕೆದಾಟು ಯೋಜನೆಗೆ ತಮಿಳುನಾಡು ಸರ್ಕಾರ ಸಹಕಾರ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ಯೋಜನೆ ಅನುಷ್ಠಾನದಿಂದ ತಮಿಳುನಾಡು ಆತಂಕ ಪಡುವ ಅಗತ್ಯವಿಲ್ಲ. ಜಲಾನಯನ ಭಾಗದ ರೈತರು ಮತ್ತು ಜನರಿಗೆ ಕುಡಿಯುವ ನೀರು ಬಳಕೆಗಷ್ಟೇ ಸೀಮಿತವಾಗುತ್ತದೆ ಎಂದವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಗೆ ತಮಿಳುನಾಡಿನ ಮೇಲೆ ದ್ವೇಷ ಮಾಡುವ, ಯುದ್ಧ ಮಾಡುವ ಉದ್ದೇಶವಿಲ್ಲ. ಅಲ್ಲಿರುವವರು ನಮ್ಮ ಅಣ್ಣ-ತಮ್ಮಂದಿರೆ. ನಮಗೆ ಯಾರ ಮೇಲೂ ದ್ವೇಷ, ಅಸೂಯೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮೇಕೆದಾಟು ನಮ್ಮ ಯೋಜನೆ. ಇದರಿಂದ ತಮಿಳುನಾಡಿಗೂ ಅನುಕೂಲವಾಗುತ್ತದೆ. ಸಮುದ್ರಕ್ಕೆ ಹೋಗುವ ನೀರು ತಡೆದು ಅದನ್ನು ಕಾವೇರಿ ಭಾಗದ ಜನರ ಬಳಕೆಗೆ ಅವಕಾಶ ಮಾಡಿಕೊಡಲಾಗುವುದು.



ಕಾವೇರಿ ನದಿಗೆ ಅಣೆಕಟ್ಟುಗಳ ಬೀಗ ಕೇಂದ್ರ ಸರ್ಕಾರದ ಕೈಯ್ಯಲ್ಲಿದೆ. ಅವರಿಗೆ ಯಾವಾಗ ಎಷ್ಟು ನೀರು ಬಿಡಬೇಕು ಎಂದು ಅವರು ತೀರ್ಮಾನಿಸಿ ಬಿಡುತ್ತಾರೆ.

ನಾವು ವಿದ್ಯುತ್ ಉತ್ಪಾದಿಸಿ ಹಿಡಿದಿಟ್ಟ ಉಳಿದ ನೀರನ್ನು ತಮಿಳುನಾಡಿಗೆ ಬಿಡುತ್ತೇವೆ. ಅದನ್ನು ಆ ರಾಜ್ಯದ ರೈತರು ಕೃಷಿಗೆ ಬಳಕೆ ಮಾಡಿಕೊಳ್ಳಬಹುದು. ಕರ್ನಾಟಕ ಸರ್ಕಾರ ಅಣೆಕಟ್ಟು ನಿರ್ಮಾಣ ಮಾಡಿದರೂ ಹಿಡಿದಿಟ್ಟ ನೀರಿನಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಕುಡಿಯುವ ನೀರಿಗಷ್ಟೇ ಬಳಸುತ್ತೇವೆ.

ಸರ್ಕಾರ ಈ ತೀರ್ಮಾನವನ್ನು ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ನ್ಯಾಯಾಲಯದ ಗಮನಕ್ಕೂ ತಂದಿದ್ದೇವೆ ಎಂದವರು ಹೇಳಿದ್ದಾರೆ.

ಈ ಹಿಂದೆ ನಾನು ಇದೇ ಜಲಸಂಪನ್ಮೂಲ ಇಲಾಖೆ ಸಚಿವರಾಗಿದ್ದ ಸಂದರ್ಭದಲ್ಲಿ ಡಿಪಿಆರ್ ಸಿದ್ಧಪಡಿಸಿ, ಸಂಪುಟ ಒಪ್ಪಿಗೆ ಪಡೆದು 5400 ಕೋಟಿ ರೂ. ಅಂದಾಜು ವೆಚ್ಚವನ್ನು ನಿಗದಿ ಮಾಡಲಾಗಿತ್ತು. ತದ ನಂತರ ಬಂದ ಬಿಜೆಪಿ ಸರ್ಕಾರ ಯೋಜನೆ ಅನುಷ್ಠಾನದ ಬಗ್ಗೆ ಒಂದು ಇಂಚು ಕೆಲಸ ಮಾಡಲಿಲ್ಲ.

ನಾವು ಮೇಕೆದಾಟು ಯೋಜನೆ ಹೋರಾಟ ನಡೆಸಿದ ಸಂದರ್ಭದಲ್ಲಿ ಒಂದು ಸಾವಿರ ಕೋಟಿ ರೂ. ಬಜೆಟ್‌ನಲ್ಲಿ ಘೋಷಣೆ ಮಾಡಿದ್ದನ್ನು ಬಿಟ್ಟರೆ, ಬೇರೇನೂ ಮಾಡಲಿಲ್ಲ.

ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಘಟಕ ಆರಂಭಿಸುವುದರಿಂದ ಅವರಿಗೆ ಆಗುವ ತೊಂದರೆ ಏನು? ನಮ್ಮಲ್ಲಿ ನೀರು ಸಂರಕ್ಷಣೆ ಮಾಡಿಕೊಂಡು ಕುಡಿಯುವ ನೀರು ಪೂರೈಸಬಹುದು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಹೀಗಾಗಿ ತಮಿಳುನಾಡಿನವರು ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಈ ಯೋಜನೆಯಿಂದ ಯಾವುದೇ ತೊಂದರೆ ಇಲ್ಲ, ಹೀಗಾಗಿ ತಮಿಳುನಾಡಿನವರಿಗೆ ಹೃದಯ ಶ್ರೀಮಂತಿಕೆ ಇರಲಿ. ನಮ್ಮಲ್ಲೂ ಹೃದಯ ಶ್ರೀಮಂತಿಕೆ ಇದೆ. ನಾವು ಜಗಳವಾಡಿ ಕೋರ್ಟ್ ಕಚೇರಿ ಅಲೆದಿದ್ದು ಸಾಕು. ಸೌಹಾರ್ದತೆಯಿಂದ ಕುಡಿಯುವ ನೀರು ಹಾಗೂ ತಮಿಳುನಾಡಿನ ರೈತರಿಗೆ ಅನುಕೂಲವಾಗುವ ಯೋಜನೆಗೆ ಸಹಕರಿಸಿ ಎಂದು ಮನವಿ ಮಾಡಿದರು.

## ಎಲೆಬೇತೂರು : ಶಾಲಾ ಪ್ರಾರಂಭೋತ್ಸವ, ಪುಸ್ತಕ ವಿತರಣೆ

ದಾವಣಗೆರೆ, ಜೂ.1- ತಾಲ್ಲೂಕಿನ ಎಲೆಬೇತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರತಿ ವರ್ಷದಂತೆ ಶಾಲಾ ಪ್ರಾರಂಭೋತ್ಸವದ ಪ್ರಯುಕ್ತ ಶಾಲಾ ಆವರಣವನ್ನು ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯವರು ಸೇರಿಕೊಂಡು ಸಿಂಗರಿಸಿದ್ದರು. ಬೇಸಿಗೆ ರಜೆ ಖುಷಿಯಲ್ಲಿದ್ದ ವಿದ್ಯಾರ್ಥಿಗಳು ಶಾಲಾ ಪ್ರಾರಂಭೋತ್ಸವದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಶಾಲೆಯ ಬಿಸಿಯೂಟ ತಯಾರಕರು ಅಡುಗೆಗೆ ಬಳಸುವ ಸಾಮಾನುಗಳನ್ನು ಸ್ವಚ್ಛಗೊಳಿಸಿ, ಇಂದಿನ ಸಿಹಿ ಊಟಕ್ಕೆ ಅಣಿ ಮಾಡುವುದರಲ್ಲಿ ತಲ್ಲೀನರಾಗಿದ್ದರು. ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯವರು, ಜನಪ್ರತಿನಿಧಿಗಳು, ಗ್ರಾಮದ ಮುಖಂಡರು ಎಲ್ಲರೂ ಸೇರಿ, ವಿದ್ಯಾರ್ಥಿಗಳ ಮೇಲೆ ಪುಷ್ಪವೃಷ್ಟಿ ಮಾಡುವ ಮೂಲಕ ಸಂಭ್ರಮದಿಂದ ಸ್ವಾಗತಿಸಿ, ಶಾಲಾ ಆವರಣಕ್ಕೆ ಬರಮಾಡಿಕೊಂಡರು. ನಂತರ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತವಾಗಿ ನೀಡುವ ಪಠ್ಯಪುಸ್ತಕಗಳನ್ನು ನೀಡಿದರು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಗ್ರಾ.ಪಂ. ಅಧ್ಯಕ್ಷೆ ಶಾಂತಮ್ಮ ಬಸವನಗೌಡಪ್ಪ, ಸದಸ್ಯರಾದ ಬಿ. ಶಿವಕುಮಾರ್, ಹಂಚಿನಮನೆ ಚೇತನ್ ಕುಮಾರ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರಾಂಪುರ ನಾಗರಾಜ್, ಶಾಲಾ ಶಿಕ್ಷಣ ಪ್ರೇಮಿ, ಕಸಾಪ ನಿರ್ದೇಶಕ ಎಂ. ಷಡಕ್ಷರಪ್ಪ, ಜಿ.ಪಂ. ಮಾಜಿ ಸದಸ್ಯ ಬಿ. ಕರಿಬಸಪ್ಪ, ಕಾಡಾ ಸಮಿತಿ ಮಾಜಿ ಸದಸ್ಯ ಎಚ್. ಬಸವರಾಜಪ್ಪ, ದಾಮ್‌ಕೋಸ್ ನಿರ್ದೇಶಕ ಮಠದ ಬಸವರಾಜಯ್ಯ, ಮುಖ್ಯೋಪಾಧ್ಯಾಯಿನಿ ಬಿ. ಸುಜಾತ, ಶಿಕ್ಷಕ ವೃಂದ ಹಾಗೂ ಪೋಷಕರು ಉಪಸ್ಥಿತರಿದ್ದರು.




**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x44, 40x60, ಪಶ್ಚಿಮ, 30x55, 30x50, ಬನಶಂಕರಿ ಬಡಾವಣೆ, ಪೂರ್ವ-ದಕ್ಷಿಣ ಕಾರ್ನರ್ 40x65, ಪೂರ್ವ 40x40, ಪಶ್ಚಿಮ 30x45, 30x67 (ಅಕ್ಕ-ಪಕ್ಕ).
ಐಗೂರು ವಿಜಯಕುಮಾರ
99457 02495

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಪುರುಷ, ಮಹಿಳೆಯರು ಬೇಕಾಗಿದ್ದಾರೆ. ವಸತಿ ಸೌಲಭ್ಯ ಇರುತ್ತದೆ.
97434 82356
ಶಾಮನೂರು ರಸ್ತೆ, ದಾವಣಗೆರೆ.

**ಮನೆಯಲ್ಲಿ ನೀರಿನ ಲೀಕೇಜ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066, 95913 10082

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. PUC or Any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577002.

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**EC / ಇಸಿ, E-swathu, Khatha Change Building Licence & Other Property Documents**
96118-66449

**WANTED**
PHARMASIST
CONTACT :
SHILPA DIAGNOSTICS PVT LTD., MCC B BLOCK, NEAR SWIMMING POOL, DAVANGERE.
98440 65638

**ಸೈಟು ಮಾರಾಟಕ್ಕಿದೆ**
ಶಾಮನೂರು ವಾಜಪೇಯಿ ಲೇಔಟ್‌ನಲ್ಲಿ 20x30 ಅಳತೆಯ ಪೂರ್ವ, ಪಶ್ಚಿಮಕ್ಕೆ ಇರುವ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
1 ಅಡಿಗೆ 4000/- ರೂಪಾಯಿಗಳು.
99454 61501, 76196 37007

**ಹುಡುಗರು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಇರುವ ಮೆಗಾ ಮಾರ್ಟ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಕೆಲಸದ ಸಮಯ : ಬೆಳಿಗ್ಗೆ : 9.15AM to 8.30PM ಮಧ್ಯಾಹ್ನದ ಊಟ ಇರುತ್ತದೆ. (ಸಂಬಳ 11,000)
81340 34264, 81975 17215

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 18-30 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಪ್ರಕಾಶ್ ಟಿವಿ ಸೆಂಟರ್
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರೋಡ್, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, 2 ಬೆಡ್ ರೂಮ್, ಬೋರ್ ಕಾರ್ಪೋರೇಷನ್ ನೀರಿನ ಸೌಲಭ್ಯ ಇದೆ. 1 ಹಾಲ್,ವಾಲ್ ಡ್ರೋಪ್, 2 ಶೋಕೇಸ್, 2 ಅಟ್ಟ, ವಿದ್ಯಾನಗರ ಪಾರ್ಕ್ ಪಕ್ಕ, 4th ಮೇನ್, 7th ಕ್ರಾಸ್, H/2 ಶಶಿಕಿರಣ್ ನಿಲಯ.
95917 47333, 97416 78794

**1 BHK ಮನೆ ಬಾಡಿಗೆಗೆ**
ಮೊದಲನೇ ಮಹಡಿ ಮನೆ 'ವಿನಾಯಕ ನಿಲಯ' 3ನೇ ಮೇನ್, ಶಾಂತಿನಗರ ರಿಂಗ್ ರೋಡ್ ಹತ್ತಿರ ಬನ್ನಿಮಹಾಂಕಾಳಿ ದೇವಸ್ಥಾನ ಎದುರು, ದಾವಣಗೆರೆ - 577006
9789990173, 63617 78509

**Wanted Teacher**
(only ladies)
B.Sc-B.Ed (High school)
01=post
Contact number
95358 85997,90359 16750

**ಕೆಲಸಕ್ಕೆ ಬೇಕಾಗಿದ್ದಾರೆ**
Xerox ಅಂಗಡಿಯಲ್ಲಿ SSLC Pass or Fail ಆದ ಹುಡುಗಿಯರು ಕರೆ ಮಾಡಿ :
91081 85926

**ಬೇಕಾಗಿದ್ದಾರೆ**
ಅಕೌಂಟೆಂಟ್ - B.A or B.com
ಸಹಾಯಕರು - B.A
ಅಟೆಂಡರ್ - SSLC
ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು
ಸಂಪರ್ಕಿಸಿ :
81473 28528

**ಸೈಟು ಮಾರಾಟಕ್ಕಿವೆ**
ರಶ್ಮಿ ಹಾಸ್ಟೆಲ್ ಪಕ್ಕದ ದೈವಜ್ಞ ಕಾಲೋನಿಯಲ್ಲಿ ಪೂರ್ವ 30x50, ಪಶ್ಚಿಮ 30x36, 30x38 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
9008093045, 73489 07416

**2 BHK HOUSE FOR RENT OR LEASE**
Near Podar International In J.H. Patel Badavane.
95358 41058
88617 11072

**ಶಿಕ್ಷಕ/ಶಿಕ್ಷಕಿ/ಸಹಾಯಕ ಬೇಕಾಗಿದ್ದಾರೆ**
1) BSc BEd (maths) - 01
2) Helper (ಸಹಾಯಕ) (boy) : 01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ, 'C' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ ಹಾಗೂ ನಿಟುವಳ್ಳಿ ಶಾಖೆ, ದಾವಣಗೆರೆ.
8792702690, 9986226454, 9844443374

**ಗ್ಯಾಸ್ ಗೀಜರ್**
Fully Automatic 2990/- Rs.
R.O. +uv ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**HOUSE FOR RENT**
2 BHK, Near Lakshmi flour mill, MCC "B" Blcok, Davangere.
89512 69249

**SPOKEN ENGLISH**
Basic, DTP, Tally
ಕಲಿಯಿರಿ ತಿಂಗಳಿಗೆ 800/- ರೂ. ಮಾತ್ರ.
91081 85926

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವಿ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಶ್ರೀ ನಿಧಿ ಸ್ಯಾರಿಸ್ ಮತ್ತು ಮ್ಯಾಚಿಂಗ್ ಸೆಂಟರ್
ಚಾಮರಾಜಪೇಟೆ, ದಾವಣಗೆರೆ.
ಸಂಪರ್ಕಿಸಿ. :
94489 79883

**ಶಿಕ್ಷಕಿಯರು ಬೇಕಾಗಿದ್ದಾರೆ**
ಗ್ರಾಮೀಣ ಪ್ರದೇಶದಲ್ಲಿ (ದಾವಣಗೆರೆ ನಗರದಿಂದ 12km ಅಂತರ) ನಡೆಯುತ್ತಿರುವ ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ಕೆಲಸ ಮಾಡಲು ಉತ್ತಮ ಇಂಗ್ಲೀಷ್ ಜ್ಞಾನ ಉಳ್ಳ, ಮಕ್ಕಳಿಗೆ ಉತ್ತಮ ಕ್ರಿಯಾತ್ಮಕ ಚಟುವಟಿಕೆಗಳನ್ನು ಕೊಡಬಲ್ಲ ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ. ಹುದ್ದೆ - ಸಹ ಶಿಕ್ಷಕಿ - 5, ಆಕರ್ಷಕ ಸಂಬಳ & ವಸತಿ ವ್ಯವಸ್ಥೆ ಇರುತ್ತದೆ. ಅರ್ಹತೆ : Engineering, B.Sc. B.Ed. MA. B.Ed. M. Sc. Diploma. & B.Sc.,
ಸಂಪರ್ಕಿಸಿ :
97426 01067, 94832 19365

**ಬೇಕಾಗಿದ್ದಾರೆ**
ತರಳಬಾಳು ಸ್ಕೂಲಿನಲ್ಲಿ ಸಿಬಿಎಸ್‌ಸಿ ಏಳನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಗೆ ಮನೆಯಲ್ಲೇ ಪಾಠ ಮಾಡಲು M.Sc ಓದಿರುವವರು ಬೇಕಾಗಿದ್ದಾರೆ.
94819 09848

**ಬೇಕಾಗಿದ್ದಾರೆ**
ಪಿಯುಸಿ ಪಾಸ್ ಅಥವಾ ಫೇಲ್ ಆದವರು ಔಷಧಿ ಅಂಗಡಿಯಲ್ಲಿ ಸೇಲ್ಸ್ ಬಾಯ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವತಃ ಬಂದು ಭೇಟಿಯಾಗಿರಿ. ಸಮಯ ಬೆಳಿಗ್ಗೆ 11.30 ರಿಂದ 2.00
8197614455, 9535097555

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.7.6.2023ರ ಬುಧವಾರ
ದಿ.8.6.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮಳಿಗೆಗಳು ಬಾಡಿಗೆಗಿವೆ**
ಜಿಲ್ಲಾ ಕ್ರೀಡಾಂಗಣದ ಹತ್ತಿರ, ಮೊದಲನೇ ಮಹಡಿಯಲ್ಲಿ 10x25 ಅಡಿ ಅಳತೆಯ 2 ಮಳಿಗೆಗಳು ಹಾಗೂ 2ನೇ ಮಹಡಿಯಲ್ಲಿ 25x25 ಅಡಿ ಅಳತೆಯ ಒಂದು ಮಳಿಗೆ ಬಾಡಿಗೆ ಇವೆ. ಮಳಿಗೆಗಳು ಸುಸಜ್ಜಿತವಾಗಿದ್ದು, ಬಾಡಿಗೆಗಾಗಿ ಸಂಪರ್ಕಿಸಿ :
94498 30566

**ಕರ್ಮಷಿಯಲ್ ಸೈಟ್ ಮಾರಾಟಕ್ಕಿದೆ**
ಶಾಮನೂರು ಗ್ರಾಮದ ಡೋರ್ ನಂ. 169/8ರಲ್ಲಿ 761 ಚದರ ಮೀಟರ್ ಅಳತೆ ಇರುವ ಕಮರ್ಷಿಯಲ್ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ.
76250 61005, 92417 84884

**ಹೆಸರು ಬದಲಾವಣೆ**
**ಪಿ.ಕೇಶವಮೂರ್ತಿ ಬಿನ್ ಲೇಟ್ ಅನಂತ್ ಶೇಟ್** 79 ವರ್ಷ ಡೋರ್ ನಂ. 612/2 ಎಸ್.ಕೆ.ಪಿ. ರಸ್ತೆ, ಸುಲ್ತಾನ್ ಪೇಟೆ ದಾವಣಗೆರೆ ಸಿಟಿ ವಾಸಿಯಾದ ನಾನು ದಿನಾಂಕ 30.5.2023ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ನನ್ನ ಹೆಸರು **ಪಿ. ಕೇಶವಮೂರ್ತಿ ಬಿನ್ ಹನುಮಂತಪ್ಪ ಶೆಟ್ಟಿ ಪಾಲ** ಎಂದು ಪಾನ್ ಕಾರ್ಡ್ ನಲ್ಲಿ ಹೆಸರು ನಮೂದಾಗಿದ್ದು,, ಈಗ ನನ್ನ ಎಲ್ಲಾ ಮೂಲ ದಾಖಲಾತಿಗಳಲ್ಲಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಮತ್ತು ಇತರೆ ಎಲ್ಲಾ ಮೂಲ ದಾಖಲಾತಿಗಳಲ್ಲಿ ನನ್ನ ಹೆಸರು **ಪಿ. ಕೇಶವಮೂರ್ತಿ ಬಿನ್ ಲೇಟ್ ಅನಂತ ಶೇಟ್** ಎಂದು ನಮೂದಾಗಿರುತ್ತದೆ. ಈ ಮೇಲ್ಕಂಡ ಎರಡೂ ಹೆಸರುಗಳು ನನ್ನದಾಗಿರುತ್ತವೆ. ಇನ್ನೂ ಮುಂದೆ ಎಲ್ಲಾ ವ್ಯವಹಾರಗಳನ್ನು **ಪಿ.ಕೇಶವಮೂರ್ತಿ** ಹೆಸರಿನಲ್ಲಿ ಮುಂದುವರೆಸುತ್ತೇನೆ.
**ಪಿ. ಕೇಶವಮೂರ್ತಿ**

**WANTED**
PROs For **Chiranjeevi Academy,** Ananthpur.
Any Degree. Attractive income. should know both Kannada and English. Contact.
94900 00406, 63014 53621

**ಬಾಡಿಗೆಗೆ ಇದೆ**
ಹದಡಿ ಮೇನ್ ರೋಡಿನಲ್ಲಿರುವ 22x74 ಸೈಜಿನ ಮೊದಲ ಮಹಡಿ ಬಾಡಿಗೆಗೆ ಇದೆ.
ವಿಳಾಸ : ಎಂ.ಎಂ. ಫಾರ್ಮಾ ಲಿಂಕ್ಸ್, ಹದಡಿ ರಸ್ತೆ, ಕೆನರಾ ಬ್ಯಾಂಕ್ ಹತ್ತಿರ, ದಾವಣಗೆರೆ.
8197614455, 9535097555

**ಅಧಿಕೃತ ಚೀಟಿ ಸಂಸ್ಥೆ**
ರೂ. 1,00,000 - 5000 - 2500
50,000 - 2500 - 1500
ಶಿವು ಚಿಟ್ ಫಂಡ್ಸ್ (ರಿ)
ಸಂಪರ್ಕಿಸಿ.
79759 08688

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**FOR RENT**
2 BHK, Ground Floor Near Laxmi flour Mill Circle, Nijalingappa Layout, Davangere.
(Veg Only)
86608 72376

**ಶಿಕ್ಷಕ / ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.A, B.Ed, B.Sc, M.A, B. Ed, M.Sc, B.Com, M.Com,
Address : Little Champs Gurukulam School, Near HKR Circle, Nittuvalli, Davanagere.
90609 06039, 98443 32559

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED TEACHERS**
Kids Campus International Pre school
Davangere
Wanted : Teachers for playgroup, Pre-kg, Lkg and Ukg
Fluency in English
99003 78196

**ಓಂ ಶ್ರೀ ಗುರುಭ್ಯೋ ನಮಃ**
ರೇಕಿ ಮತ್ತು ರಾಜಕ್ರಿಯಾ ರೇಖಿ
(ಆರೋಗ್ಯ, ವಿವಾಹ, ಸಂತಾನ, ಶಿಕ್ಷಣಕ್ಕಾಗಿ ಮತ್ತು ಕಾಯಿಲೆ ಕರ್ಮ ನಿವಾರಣೆಗಾಗಿ)
ಹಾವೇರಿ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗದಲ್ಲಿ ತರಬೇತಿಗಾಗಿ ಸಂಪರ್ಕಿಸಿ :
76761 83394, 90364 90336

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**ಕಲಿಕೆಯಲ್ಲಿ ಹಿಂದುಳಿದ**
ನಿಯಂತ್ರಿಸಲಾಗದ ಮಕ್ಕಳಿಗಾಗಿ ವಿಶೇಷ ಹಾಗೂ ಚಟುವಟಿಕೆಯುಕ್ತ ಶಿಕ್ಷಣದ ಅವಶ್ಯಕತೆಯಿದ್ದಲ್ಲಿ ಸಂಪರ್ಕಿಸಿ :
95903 80251
86184 09987

**ಮಾರಾಟಕ್ಕೆ/ಬಾಡಿಗೆಗೆ**
ಮೆಟಲ್ ಫ್ರೇಮ್‌ನ ಫೋಲ್ಡೇಬಲ್ ಫೈಬರ್ ಕಾಟ್‌ಗಳು ಮಾರಾಟಕ್ಕೆ/ ಬಾಡಿಗೆಗೆ. ಹಾಸ್ಟೆಲ್, ಪಿ.ಜಿ ಮತ್ತು ಹಾಸ್ಪಿಟಲ್ ಗೆ ಉಪಯೋಗಿಸಬಹುದು
ಸಂಪರ್ಕಿಸಿ :
90711 06106

**JOBS FOR EVERYONE**
Work from home and from office for everyone including students and housewife according to their education and skillset
91642 56425
LABNTAB.COM@GMAIL.COM

# ಸಮಯ ವ್ಯರ್ಥ ಮಾಡದೆ ಭವಿಷ್ಯ ರೂಪಿಸಿಕೊಳ್ಳಬೇಕು

## ವಿದ್ಯಾರ್ಥಿಗಳಿಗೆ ಕಾಗಿನೆಲೆ ಶ್ರೀ ಕರೆ




ಮಲೇಬೆನ್ನೂರು, ಜೂ. 1- ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ, ಸದುಪಯೋಗಪಡಿಸಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಕಾಗಿನೆಲೆ ಕನಕ ಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಕರೆ ನೀಡಿದ್ದಾರೆ.

ಅವರು ಗುರುವಾರ ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠದಲ್ಲಿ ಹಮ್ಮಿಕೊಂಡಿದ್ದ ಚಂದ್ರಗುಪ್ತ ಮೌರ್ಯ ಪಿಯು ಕಾಲೇಜಿನ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ತಂದೆ- ತಾಯಿ ಹಾಗೂ ಗುರುಗಳಿಗೆ ಮತ್ತು ಓದಿದ ಶಾಲೆಗೆ ಹೆಸರು ತರುವಂತಹ ಕೆಲಸವನ್ನು ವಿದ್ಯಾರ್ಥಿಗಳು ಮಾಡಬೇಕು. ಕಾಲೇಜಿನವರು ನಿಮ್ಮ ಭವಿಷ್ಯ ರೂಪಿಸಲು ಬತ್ತಿ ಮತ್ತು ಎಣ್ಣೆಯಾಗಿ ಈ ದೀಪದಂತೆ ಉರಿಯುವ ಮೂಲಕ ಶ್ರಮಿಸುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳು ಗುರಿ ಮುಟ್ಟಲು ಗಮನಹರಿಸಬೇಕೆಂದು ಸ್ವಾಮೀಜಿ ಕರೆ ನೀಡಿದರು.

ಆದಿಕೇಶವ ಅಕಾಡೆಮಿ ಶೈಕ್ಷಣಿಕ ನಿರ್ದೇಶಕ ಡಾ. ಪ್ರಕಾಶ್ ಜೈನ್ ಪ್ರಾಸ್ತಾವಿಕ ಮಾತನಾಡಿದರು. ಚಂದ್ರಗುಪ್ತ ಮೌರ್ಯ ಶೈಕ್ಷಣಿಕ ಸಂಸ್ಥೆ ಕಾರ್ಯದರ್ಶಿ ನಿಂಗಪ್ಪ. ಸಂಸ್ಥೆ ಶೈಕ್ಷಣಿಕ ನಿರ್ದೇಶಕಿ ಶೃತಿ ಇನಾಮ್‌ದಾರ್, ಆದಿಕೇಶವ ಅಕಾಡೆಮಿ ನಿರ್ದೇಶಕರಾದ ಜ್ಯೋತಿ ಕುಮಾರ್, ಗುರುದತ್ತ ಸಾನಾಬಳ್, ಧನರಾಜ್, ಬಿ.ಬಿ. ಮಲ್ಲೇಶ್, ಉಪನ್ಯಾಸಕರಾದ ಜಯಪ್ರಕಾಶ್ ಹಾಗೂ ಬಿ.ಎಸ್. ರವೀಂದ್ರ, ಮಾರುತಿ ಮೈಸೂರು, ಪಾಲಿಕೆ ಸದಸ್ಯರಾದ ರಮೇಶ್, ಶೇಖರ್ ಹಾಗೂ ಶೈಕ್ಷಣಿಕ ಸಂಸ್ಥೆ ಸಿಬ್ಬಂದಿ ಭಾಗವಹಿಸಿದ್ದರು.

# ಭ್ರಷ್ಟಾಚಾರ ಮುಚ್ಚಿ ಹಾಕಲು ತರಾತುರಿಯಲ್ಲಿ ಈಜುಕೊಳ ಉದ್ಘಾಟನೆ: ದಿನೇಶ್ ಕೆ.ಶೆಟ್ಟಿ



ದಾವಣಗೆರೆ, ಜೂ. 1 - ಸಂಸದರು, ಹಿಂದಿನ ಜಿಲ್ಲಾ ಸಚಿವರು ಮತ್ತು ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ಮುಚ್ಚಿ ಹಾಕುವ ಉದ್ದೇಶದಿಂದ ತರಾತುರಿಯಲ್ಲಿ ದೇವರಾಜ ಅರಸು ಬಡಾವಣೆಯ ಈಜುಕೊಳವನ್ನು ಉದ್ಘಾಟಿಸಲಾಗಿದೆ ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಆರೋಪಿಸಿದ್ದಾರೆ.

ಈಜುಕೊಳವನ್ನು ನಿನ್ನೆ ವೀಕ್ಷಿಸಿದ ಅವರು, ಇನ್ನು ಕಾಮಗಾರಿ ಪೂರ್ಣಗೊಂಡಿಲ್ಲ. ಕೆಲವು ಕಡೆ ಕಳಪೆ ಕಾಮಗಾರಿ ಆಗಿದ್ದರೂ ಸಹ ಏಕಾಏಕಿ ಉದ್ಘಾಟನೆ ಮಾಡಿರುವುದು ಏಕೆ ? ಎಂದು ಪ್ರಶ್ನಿಸಿದರು. ಇದರಿಂದ ಇಬ್ಬರು ಬಾಲಕರು ಸಾವನ್ನಪ್ಪಿದ್ದಾರೆ. ಇದಕ್ಕೆ ಸಂಸದರು, ಸಚಿವರೇ ಕಾರಣ ಎಂದು ಆರೋಪಿಸಿದ ಅವರು, ಬಾಲಕರು ಸಾವನ್ನಪ್ಪಿದ್ದರೂ ಸಹ ಆ ಕುಟುಂಬಗಳಿಗೆ ಸೌಜನ್ಯಕ್ಕಾದರೂ ಸಾಂತ್ವನ ಹೇಳುವ ಕೆಲಸ ಸಂಸದರಿಂದ ಆಗಿಲ್ಲ ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಎ.ನಾಗರಾಜ್, ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ಎಸ್.ಎಸ್. ಮೆಡಿಕಲ್ ಕಾಲೇಜಿನಲ್ಲಿ 'ವಿಶ್ವ ತಂಬಾಕು ರಹಿತ' ದಿನಾಚರಣೆ



ದಾವಣಗೆರೆ, ಜೂ. 1- ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ 'ವಿಶ್ವ ತಂಬಾಕು ರಹಿತ' ದಿನ ಆಚರಿಲಾಯಿತು. 'ನಮಗೆ ಆಹಾರ ಬೇಕು ತಂಬಾಕು ಅಲ್ಲ' ಈ ವರ್ಷದ ತಂಬಾಕು ರಹಿತ ದಿನದ ಘೋಷಣೆಯಾಗಿದ್ದು, ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್, ವೈದ್ಯಕೀಯ ನಿರ್ದೇಶಕ ಡಾ. ಅರುಣ್ ಕುಮಾರ್ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಹೊರರೋಗಿಗಳ ವಿಭಾಗದ ಪ್ರಾಂಗಣದಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ನೂರಾರು ರೋಗಿಗಳು, ರೋಗಿಗಳ ಸಂಬಂಧಿಕರು, ವೈದ್ಯಕೀಯ ವಿದ್ಯಾರ್ಥಿಗಳು, ಶುಶ್ರೂಷಕ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸಂಸ್ಥೆಯ ಶ್ವಾಸಕೋಶ ವಿಭಾಗದ ವತಿಯಿಂದ ಆಯೋಜಿಸಲಾಗಿತ್ತು. ಶ್ವಾಸಕೋಶ ವಿಭಾಗದ ಪ್ರಾಧ್ಯಾಪಕ ಡಾ. ಅನೂಪ್ ಬಾಣೂರ್ ನೆರೆದಿದ್ದ ಜನರನ್ನು ಉದ್ದೇಶಿಸಿ ತಂಬಾಕು ಮತ್ತು ಇನ್ನಿತರೆ ತಂಬಾಕು ಉತ್ಪನ್ನಗಳಿಂದಾಗುವ ದುಷ್ಪರಿಣಾಮಗಳು ಅದರಿಂದಾಗುವ ಮಾರಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್ ಇತ್ಯಾದಿಗಳ ಕುರಿತು ಜನರಿಗೆ ತಿಳಿ ಹೇಳಿ ಜನರಲ್ಲಿ ಜಾಗೃತಿ ಮೂಡಿಸಿದರು.

ಶ್ವಾಸಕೋಶ ವಿಭಾಗದ ಇನ್ನೋರ್ವ ಸಹ ಪ್ರಾಧ್ಯಾಪಕರಾದ ಡಾ. ಪ್ರಿಯದರ್ಶಿನಿ ರಾಯ್ಕರ್ ನೇತೃತ್ವದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮತ್ತು ಸಂಸ್ಥೆಯ ಗೃಹ ವೈದ್ಯರು ಸೇರಿ ಆಸ್ಪತ್ರೆಯ ಪ್ರಾಂಗಣದಲ್ಲಿ ಬೀದಿ ನಾಟಕದ ಮೂಲಕ ಜನರಲ್ಲಿ ತಂಬಾಕು, ಸಿಗರೇಟ್ ಸೇವನೆಯಿಂದಾಗುವ ಅಡ್ಡ ಪರಿಣಾಮಗಳು, ಜೀವ ಹಾನಿ ಕುರಿತು ಸಾಮಾನ್ಯ ಜನರಿಗೆ ಮನ ಮುಟ್ಟುವ ರೀತಿಯಲ್ಲಿ ನಾಟಕದ ಮೂಲಕ ಅರಿವು ಮೂಡಿಸಿದರು. ಕೊನೆಯಲ್ಲಿ ವಿಭಾಗದ ಡಾ. ಅಜಿತ್ ಈಟಿ ವಂದಿಸಿದರು.

# ಮಲೇಬೆನ್ನೂರು : ಎಇಇ ಚಂದ್ರಕಾಂತ್ ವಯೋನಿವೃತ್ತಿ, ಬೀಳ್ಕೊಡುಗೆ



ಮಲೇಬೆನ್ನೂರು, ಜೂ. 1 - ಇಲ್ಲಿನ ಭದ್ರಾ ನಾಲಾ ನಂ.3 ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಚಂದ್ರಕಾಂತ್ ಅವರು ಬುಧವಾರ ಸೇವೆಯಿಂದ ವಯೋ ನಿವೃತ್ತರಾದರು.

ಈ ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚಂದ್ರಕಾಂತ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ, ಬೀಳ್ಕೊಡಲಾಯಿತು.

ಈ ವೇಳೆ ಮಾತನಾಡಿದ ಭದ್ರಾ ನಾಲಾ ನಂ.3 ವಿಭಾಗದ ಕಾರ್ಯಪಾಲಕ ಅಭಿಯಂತರ ಜಿ.ಎಸ್. ಪಟೇಲ್ ಅವರು ರೈತರ ಬೆಳೆಗಳಿಗೆ ನೀರು ಒದಗಿಸುವ ಈ ಸೇವೆ ಅವಿಸ್ಮರಣೀಯವಾದದ್ದು, ರೈತರಿಗೆ ನೀರಿನ ತೊಂದರೆ ಆಗದಂತೆ ನೋಡಿಕೊಂಡರೆ, ರೈತರು ಸದಾ ನಮ್ಮನ್ನು ಸ್ಮರಿಸುತ್ತಾರೆ ಎಂಬುದಕ್ಕೆ ಚಂದ್ರಕಾಂತ್ ಸಾಕ್ಷಿಯಾಗಿದ್ದಾರೆ ಎಂದರು.

ಕಛೇರಿಯ ಸಿಬ್ಬಂದಿಗಳಾದ ಹಚ್. ಆಂಜನೇಯ, ಟಿ.ಬಿ. ಮಂಜುನಾಥ್ ಸಿ.ರಾಜು, ಲಕ್ಷ್ಮಿ ವಿ. ಆಚಾರ್ಯ, ಚಂದ್ರಪ್ಪ ಓಲೆಕಾರ್, ಸಹಾಯಕ ಇಂಜಿನಿಯರ್‌ಗಳಾದ ಧನಂಜಯ, ಡಿ.ರಾಜು, ರೆಹಮಾನ್ ಸಾಬ್, ಶ್ವೇತಾ, ಕಛೇರಿ ಅಧೀಕ್ಷಕಿ ಮಂಜುಳಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಿಗಳಿ: ಉದ್ಯೋಗ ಖಾತ್ರಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆ



ಮಲೇಬೆನ್ನೂರು, ಜೂ. 1 - ಜಿಗಳಿ ಗ್ರಾ.ಪಂ. ಕಛೇರಿ ಆವರಣದಲ್ಲಿ ಬುಧವಾರ ಆರೋಗ್ಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಮತ್ತು ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ವತಿಯಿಂದ ಆರೋಗ್ಯ ಅಮೃತ ಅಭಿಯಾನದಡಿ ಉದ್ಯೋಗ ಖಾತ್ರಿ ಕೂಲಿ ಕಾರ್ಮಿಕರಿಗೆ, ಸ್ವ-ಸಹಾಯ ಸಂಘಗಳ ಸದಸ್ಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ವಿನೋದ ಜಿ.ಆರ್. ಹಾಲೇಶ್‌ಕುಮಾರ್ ಮತ್ತು ಗ್ರಾ.ಪಂ. ಸದಸ್ಯರಾದ ಡಿ.ಎಂ. ಹರೀಶ್, ಬೇವಿನಹಳ್ಳಿ ಆನಂದ್‌ಗೌಡ ಅವರು ಶಿಬಿರವನ್ನು ಉದ್ಘಾಟಿಸಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಎ.ಆರ್. ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ ಶಿಬಿರದ ಮಹತ್ವ ಹಾಗೂ ವಿಶ್ವ ತಂಬಾಕು ವಿರೋಧಿ ದಿನಾಚರಣೆಯ ಉದ್ದೇಶವನ್ನು ತಿಳಿಸಿದರು. ತಾ.ಪಂ. ಐ.ಇ.ಸಿ. ಸಂಯೋಜಕ ಬಿ.ಎಂ. ಮಾರುತಿ ಕುಮಾರ್, ಕೆ.ಹೆಚ್.ಪಿ.ಟಿ. ತಾ. ಸಂಯೋಜಕಿ ಶ್ರೀಮತಿ ವನಿತಾ ಗ್ರಾ.ಪಂ. ಕಾರ್ಯದರ್ಶಿ ಶ್ರೀಮತಿ ಸುಜಾತ, ಇತರರು ಭಾಗವಹಿಸಿದ್ದರು.

# ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಪೂಜೆ



ದಾವಣಗೆರೆ, ಮೇ 3- ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಕಾರ ಹುಣ್ಣಿಮೆ ಪ್ರಯುಕ್ತ ನಾಡಿದ್ದು ದಿನಾಂಕ 4 ರ ಭಾನುವಾರ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ಕ್ಯಾಂಪಸ್ ಸಂದರ್ಶನ : ದವನ್ ಕಾಲೇಜು ಬಿಸಿಎ ವಿದ್ಯಾರ್ಥಿಗಳು ಆಯ್ಕೆ




ದಾವಣಗೆರೆ, ಜೂ. 1- ದವನ್ ಪದವಿ ಕಾಲೇಜಿನಲ್ಲಿ ತೃತೀಯ ಬಿಸಿಎ ವಿದ್ಯಾರ್ಥಿಗಳಿಗೆ, 2022-23 ನೇ ಸಾಲಿನ ಕ್ಯಾಂಪಸ್ ನೇಮಕಾತಿ ಪ್ರಕ್ರಿಯೆ ನಡೆಯಿತು. ನೇಮಕಾತಿಯಲ್ಲಿ ತೃತೀಯ ಬಿಸಿಎ ವಿದ್ಯಾರ್ಥಿಗಳಾದ ಎಲ್. ನಮ್ರತಾ, ಎ.ಎನ್.ಮೇಘನಾ, ಜೆ.ಎ. ವರುಣ್ ಕುಮಾರ್, ಬಿ. ಚೇತನ್, ಅಜಯ್ ಬ್ಯಾನರ್ಜಿ ಇವರುಗಳು ಮೈಸೂರಿನ ಹೆರಿನ್ ಎಲೆಕ್ಟ್ರಾನಿಕ್ಸ್ ಕಂಪನಿಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳಿಗೆ ಕಾಲೇಜಿನ ಕಾರ್ಯದರ್ಶಿಗಳಾದ ವೀರೇಶ್ ಪಟೇಲ್, ಜಂಟಿ-ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ನಿರ್ದೇಶಕ ಹರ್ಷರಾಜ್ ಎ. ಗುಜ್ಜರ್, ಉಪ ಪ್ರಾಚಾರ್ಯರಾದ ಪ್ರೊ. ಎನ್. ಅನಿತಾ, ನೇಮಕಾತಿ ಸಂಯೋಜನಾಧಿಕಾರಿ ಪ್ರೊ. ಬಿ.ಎಸ್. ಶ್ವೇತಾ ಅಭಿನಂದಿಸಿದ್ದಾರೆ.

# 4 ರಂದು ದಿ ಹಿಂದೂ ಎಜುಕೇಶನ್ ಪ್ಲಸ್ ಕೆರಿಯರ್ ಕೌನ್ಸೆಲಿಂಗ್

ದಾವಣಗೆರೆ,ಜೂ. 1- ದಿ ಹಿಂದೂ ಎಜುಕೇಶನ್ ಪ್ಲಸ್ ವೃತ್ತಿ ಕೌನ್ಸೆಲಿಂಗ್ -2023 ಕಾರ್ಯಕ್ರಮವನ್ನು ಇದೇ ದಿನಾಂಕ 4ರ ಭಾನುವಾರ ನಗರದ ಜಿ.ಎಂ.ಐ.ಟಿ. ಕಾಲೇಜಿನ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ ನಡೆಸಲಾಗುವುದು.

ಬೆಳಗ್ಗೆ 9.30 ರಿಂದ ಮಧ್ಯಾಹ್ನ 1 ರವರೆಗೆ ಮುಖ್ಯ ಕಾರ್ಯಕ್ರಮ ನಡೆಯಲಿದ್ದು, ಪ್ರವೇಶ ಉಚಿತವಾಗಿರುತ್ತದೆ. ಕಾರ್ಯಕ್ರಮವು 9 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ಮತ್ತು ಪದವಿ ಪೂರ್ವ ತರಗತಿಗಳ ಕೋರ್ಸ್‌ಗಳಿಗೆ ಮತ್ತು ಅವರ ಪೋಷಕರಿಗೆ ತೆರೆದಿರುತ್ತದೆ.

ವೃತ್ತಿ ಅವಕಾಶಗಳನ್ನು ಅನ್ವೇಷಿಸಲು, ಕೈಗಾರಿಕಾ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ವಿವಿಧ ಕ್ಷೇತ್ರಗಳಲ್ಲಿ ಭವಿಷ್ಯದ ಭವಿಷ್ಯಗಳ ಬಗ್ಗೆ ಒಳನೋಟಗಳನ್ನು ಪಡೆಯಲು ಒಂದು ಅನನ್ಯ ಅವಕಾಶವನ್ನು ನೀಡಲಾಗುತ್ತಿದೆ.

ದಿ ಹಿಂದೂ-ಎಜುಕೇಷನ್ ಪ್ಲಸ್ ಪ್ರಕಟಿಸಿದ ವೃತ್ತಿ ಕೈಪಿಡಿಯ ಪ್ರತಿಯನ್ನು ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಉಚಿತವಾಗಿ ವಿತರಿಸಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ : 9886051030, 9845095781.

# ಇನ್ನೊಂದು ಮಂಗಳಯಾನಕ್ಕೆ ಇಸ್ರೋ ಪರಿಶೀಲನೆ

ಬೆಂಗಳೂರು, ಜೂ. 1 – ಇನ್ನೊಂದು ಮಂಗಳಯಾನ ಕೈಗೊಳ್ಳುವ ಮೂಲಕ ಮಂಗಳ ಗ್ರಹದ ಅಧ್ಯಯನ ನಡೆಸಲು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಪರಿಗಣಿಸುತ್ತಿದೆ.

ಇನ್ನಷ್ಟು ದೊಡ್ಡ ಹಾಗೂ ಹೆಚ್ಚು ವೈಜ್ಞಾನಿಕ ಫಲಿತಾಂಶ ನೀಡುವ ಮಂಗಳಯಾನಕ್ಕೆ ಪರಿಶೀಲಿಸಲಾಗುತ್ತಿದೆ ಎಂದು ಇಸ್ರೋದ ಯು.ಆರ್. ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ಎಂ. ಶಂಕರನ್ ತಿಳಿಸಿದ್ದಾರೆ.

2013ರಲ್ಲಿ ಭಾರತ ಮೊದಲ ಯಶಸ್ವೀ ಮಂಗಳಯಾನ ಕೈಗೊಂಡಿತ್ತು. 2022ರಲ್ಲಿ ಮಂಗಳಯಾನ ಸಂಪರ್ಕ ಕಳೆದುಕೊಂಡಿತ್ತು.

ಮೂರನೇ ಚಂದ್ರಯಾನಕ್ಕಾಗಿ ಸಿದ್ಧತೆ ವೇಗವಾಗಿ ನಡೆದಿದೆ. ಜುಲೈ ತಿಂಗಳಲ್ಲಿ ಉಪಗ್ರಹದ ಉಡಾವಣೆ ನಡೆಯಬಹುದಾಗಿದೆ ಎಂದು ಶಂಕರನ್ ಹೇಳಿದ್ದಾರೆ.

# ರಾಣೇಬೆನ್ನೂರು : ವಿದ್ಯಾರ್ಥಿಗಳಿಗೆ ಪುಷ್ಪ ನೀಡಿ ಶಾಲೆಗೆ ಸ್ವಾಗತ



ರಾಣೇಬೆನ್ನೂರು, ಜೂ. 1 - ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆ ಕೊಡಿಯಾಲದಲ್ಲಿ ವಿದ್ಯಾರ್ಥಿಗಳಿಗೆ ಪುಷ್ಪ ನೀಡುವುದರ ಮುಖಾಂತರ ಶಾಲೆಯ ಅಧ್ಯಕ್ಷರಾದ ಶೋಭಾ ಹಿರೇಮಠ ಮತ್ತು ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ ಬಾವಿಕಟ್ಟಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

# ನಗರದಲ್ಲಿ ಇಂದು ಐಸಿಇಐ ಸಮ್ಮೇಳನ

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಇಂಜಿನಿಯರಿಂಗ್ ಇನೋವೇಶನ್ (ಐಸಿಇಐ-2023) ಕುರಿತು 2ನೇ ಅಂತರರಾಷ್ಟ್ರೀಯ ಸಮ್ಮೇಳನವನ್ನು ಇಂದು ಆಯೋಜಿಸಲಾಗಿದೆ. ಪ್ರಾಂಶುಪಾಲ ಡಾ. ಡಿ.ಬಿ ಗಣೇಶ್, ಡಾ. ಸಂತೋಷ್ ಹೇರೂರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

# ದೃಶ್ಯಕಲಾ ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.1- ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಆದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಫೌಂಡೇಶನ್ 1 ವರ್ಷ, ವಿಶೇಷ ಅಧ್ಯಯನ 3 ವರ್ಷ ಒಟ್ಟು 4 ವರ್ಷಗಳ ದೃಶ್ಯಕಲಾ ಪದವಿ ಶಿಕ್ಷಣ ನೀಡಲಾಗುವುದು. ಪ್ರವೇಶ ಬಯಸುವ ಅಭ್ಯರ್ಥಿ ಪಿಯುಸಿ ಅಥವಾ ಅದರ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗೆ ಮಹಾವಿದ್ಯಾಲಯದ ಸಂಯೋಜನಾಧಿಕಾರಿ ಡಾ. ಸತೀಶ್ ಕುಮಾರ್ ಪಂಚಪ್ಪ ವಲ್ಲೇಪುರೆ (9448414483) ಹಾಗೂ ಪ್ರವೇಶಾತಿಯ ನೋಡಲ್ ಅಧಿಕಾರಿಗಳಾದ ಡಾ. ಜೈರಾಜ ಎಂ. ಚಿಕ್ಕಪಾಟೀಲ್ (9986687098) ಅವರನ್ನು ಸಂಪರ್ಕಿಸಬಹುದು.

# ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗೆ ಅರ್ಜಿ

ದಾವಣಗೆರೆ, ಜೂ.1- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. 5ನೇ ತರಗತಿಯಿಂದ 10ನೇ ತರಗತಿಯವರೆಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ತಮ್ಮ SATS ID ಯೊಂದಿಗೆ ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದ ವಿಳಾಸ: https://shp.karnataka.gov.in/ ಇಲ್ಲಿ ಸಂದರ್ಶಿಸಿ ಅರ್ಜಿ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನ ಜೂನ್ 15 ಆಗಿದೆ.

# ರಾಷ್ಟ್ರೀಯ ಪಂಜ ಕುಸ್ತಿ ಸ್ಪರ್ಧೆ: ಹರಿಹರದ ಬ್ರದರ್ ಜಿಮ್‌ಗೆ 4 ಚಿನ್ನ, 7 ಬೆಳ್ಳಿ, 5 ಕಂಚು ಸೇರಿ 16 ಪದಕಗಳು



ದಾವಣಗೆರೆ, ಜೂ. 1- ಕಾಶ್ಮೀರ ರಾಜ್ಯದ ಶ್ರೀನಗರದಲ್ಲಿ ಕಳೆದ ವಾರ ಜರುಗಿದ 45ನೇ ರಾಷ್ಟ್ರೀಯ ಆರ್ಮ್ ರೆಜಲಿಂಗ್ (ಪಂಜ ಕುಸ್ತಿ) ಸ್ಪರ್ಧೆಯಲ್ಲಿ ಹರಿಹರ ಬ್ರದರ್ ಜಿಮ್‌ನ ಕ್ರೀಡಾಪಟುಗಳು 4 ಚಿನ್ನದ ಪದಕ, 7 ಬೆಳ್ಳಿಯ ಪದಕ, 5 ಕಂಚಿನ ಪದಕ ಸೇರಿದಂತೆ, ಒಟ್ಟು 16 ಪದಕಗಳನ್ನು ಗೆದ್ದುಕೊಂಡಿದ್ದಾರೆ. ಈ ಸ್ಪರ್ಧೆಗಳಲ್ಲಿ 21 ರಾಜ್ಯಗಳಿಂದ ಸುಮಾರು 850 ಜನ ಸ್ಪರ್ಧಾಳು ಗಳು ಭಾಗವಹಿಸಿದ್ದು, ಹರಿಹರದ ಬ್ರದರ್ ಜಿಮ್‌ನ 30 ಕ್ರೀಡಾಪಟುಗಳು ರಾಜ್ಯವನ್ನು ಪ್ರತಿನಿಧಿಸಿದ್ದರು. ಇವರಲ್ಲಿ 4 ಜನ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಆರ್ಮ್ ರೆಜಲಿಂಗ್ (ಪಂಜ ಕುಸ್ತಿ) ಸ್ಪರ್ಧೆಗಳಿಗೆ ಆಯ್ಕೆಯಾ ಗಿದ್ದಾರೆ. ವಿಜೇತ ಕ್ರೀಡಾಪಟುಗಳಿಗೆ ಹರಿಹರ ಬ್ರದರ್ ಜಿಮ್‌ನ ಸಂಚಾಲಕ ಅಕ್ರಂ ಬಾಷಾ, ತರಬೇತುದಾರ ಮೊಹಮ್ಮದ್ ರಫೀಕ್ ಅಭಿನಂದಿಸಿದ್ದಾರೆ.

# ಇಬ್ಬರು ಮಕ್ಕಳನ್ನು ಕೊಂದ ತಂದೆ:ಬಂಧನ

ದಾವಣಗೆರೆ, ಜೂ.1- ತನ್ನ ಇಬ್ಬರು ಮಕ್ಕಳಿಗೆ ಟೆಕ್ನೋ ಟೇಪ್ ಸುತ್ತಿ ಉಸಿರುಗಟ್ಟಿಸಿ ಕೊಲೆ ಮಾಡಿದ ಹಿನ್ನೆಲೆಯಲ್ಲಿ ಅಮರ್ (36) ಎಂಬಾತನ್ನು ಪೊಲೀಸರು ಬಂಧಿಸಿದ್ದಾರೆ.

ಗೋಕಾಕ್ ಮೂಲದ ಹಾಲಿ ದಾವಣಗೆರೆ ನಗರದ ಆಂಜನೇಯ ಬಡಾವಣೆ ವಾಸಿಯಾದ, ಹರಿಹರದ ಕಾರ್ಗಿಲ್ ಫ್ಯಾಕ್ಟರಿಯಲ್ಲಿ ಕೆಮಿಕಲ್ ಇಂಜಿನಿಯರಿಂಗ್ ಕೆಲಸ ಮಾಡುತ್ತಿರುವ ಆರೋಪಿತ ಅಮರ್, ಕಳೆದ ಬುಧವಾರ ರಾತ್ರಿ 10.30 ಗಂಟೆ ವೇಳೆಗೆ ತನ್ನ ಬುದ್ದಿ ಮಾಂದ್ಯ ಮಕ್ಕಳಾದ ಅದ್ವೈತ್ ಮತ್ತು ಅನ್ವಿತ್ ಅವಳಿ ಮಕ್ಕಳನ್ನು ಕೊಲೆ ಮಾಡಿದ್ದಾನೆ. ಬುದ್ದಿಮಾಂದ್ಯರಾದ ಮಕ್ಕಳಿಗೆ ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲ. ಎಲ್ಲದಕ್ಕೂ ಹಠ ಮಾಡುತ್ತಿದ್ದರು. ಇದರಿಂದ ತನ್ನ ಕಾರಿನಲ್ಲಿ ಮಕ್ಕಳನ್ನು ಕರೆದುಕೊಂಡು ಚಳಗೇರಿ ಟೋಲ್ ಹತ್ತಿರ ಕರೆದುಕೊಂಡು ಹೋಗಿ ಸರ್ವೀಸ್ ರಸ್ತೆಯಲ್ಲಿ ಮಕ್ಕಳಿಬ್ಬರಿಗೂ ಟೆಕ್ನೋ ಟೇಪ್ ಸುತ್ತಿ ಉಸಿರುಗಟ್ಟಿಸಿ, ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ.

ಈ ಸಂಬಂಧ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಎಸ್ಪಿ ಅರುಣ್ ತಿಳಿಸಿದ್ದಾರೆ.

# ಕ್ರಾಕರಿ ಗ್ಲಾಸ್ ಐಟಂಗಳ ಮಾರಾಟ



ದಾವಣಗೆರೆ, ಜೂ. 1- ನಗರದ ಜಿಲ್ಲಾ ಗುರು ಭವನದಲ್ಲಿ ಅತಿ ದೊಡ್ಡ ಇಂಪೋರ್ಟೆಡ್ ಇಂಡಿಯನ್ ಕ್ರಾಕರಿ ಗ್ಲಾಸ್ ಐಟಂಗಳ ಬೃಹತ್ ಮಾರಾಟ ಮೇಳ ನಡೆದಿದೆ. ಗ್ಲಾಸ್‌ವೇರ್ ಐಟಂಗಳು, ಮೈಕ್ರೋವೇವ್‌ಗೆ ಸಂಬಂಧಿಸಿದ ಗ್ಲಾಸ್ ಮತ್ತು ಪ್ಲಾಸ್ಟಿಕ್ ಐಟಂಗಳು, ಥೈಲ್ಯಾಂಡ್, ಫ್ರಾನ್ಸ್, ಜರ್ಮನಿಯ ಗ್ಲಾಸ್‌ವೇರ್, ಫ್ಯಾನ್ಸಿ ಪ್ಲಾಸ್ಟಿಕ್ ಐಟಂಗಳು, ಬೋನ್ ಚೈನಾ ಪಿಂಗಾಣಿ ಮತ್ತು ಗ್ಲಾಸ್ ಐಟಂಗಳು ಲಭ್ಯ ಇವೆ. 1 ಕೆ.ಜಿ.ಗೆ 299 ರೂ ಮಾತ್ರ. ಪ್ಯೂರ್ ಮೇಲಾಮೈನ್ ಶೇ. 100 ಫುಡ್ ಗ್ರೇಡ್ ಪಿಂಗಾಣಿಗಳು ಶೇ. 50 ರವರೆಗೆ ರಿಯಾಯಿತಿ ದರದಲ್ಲಿ ದೊರೆಯುತ್ತವೆ.

# ಹೆಂಡತಿ ಮತ್ತು ಮಗು ಕೊಲೆ ಆರೋಪಿಗೆ ಜೀವಾವಧಿ ಶಿಕ್ಷೆ

ದಾವಣಗೆರೆ, ಜೂ.1- ಪತ್ನಿ ಮತ್ತು ಮಗಳನ್ನು ಕೊಲೆ ಮಾಡಿರುವ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯವು ಆರೋಪಿ ಮಾಯಕೊಂಡ ಗ್ರಾಮದ ನಾಗರಾಜ ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಪ್ರಕರಣದ ಸಂಪೂರ್ಣ ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಪ್ರವೀಣ್ ಕುಮಾರ್ ಆರ್.ಎನ್ ಅವರು ಅಪರಾಧಿ ನಾಗರಾಜನಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ನಾಗರಾಜ ತನ್ನ ಪತ್ನಿಯ ಶೀಲ ಶಂಕಿಸಿ 19.4.2018 ರಂದು ಬೆಳಗಿನ ಜಾವ ಪತ್ನಿ ಶಿಲ್ಪಾ ಮತ್ತು ಎರಡು ವರ್ಷದ ಕೃತಿಕಾ ಎಂಬ ಮಗಳನ್ನು ಕೊಲೆ ಮಾಡಿದ ಆರೋಪಕ್ಕೆ ಒಳಗಾಗಿದ್ದ. ಅಂದಿನ ತನಿಖಾಧಿಕಾರಿ ಗುರುಬಸವರಾಜ್ ತನಿಖೆ ಮಾಡಿ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಜಯಪ್ಪ ಕೆ.ಜಿ ವಾದ ಮಂಡಿಸಿದ್ದರು.

# ಮೊಬೈಲ್, ಹಣ ಕಿತ್ತುಕೊಂಡು ಪರಾರಿ

ದಾವಣಗೆರೆ, ಜೂ.1- ಬಾಡಾ ಕ್ರಾಸ್ ಬಳಿ ಮೂವರು ಯುವಕರು ವ್ಯಕ್ತಿಯೊಬ್ಬರಿಂದ ಮೊಬೈಲ್ ಹಾಗೂ ಹಣ ಕಿತ್ತುಕೊಂಡು ಪರಾರಿಯಾದ ಘಟನೆ ನಿನ್ನೆ ರಾತ್ರಿ 8 ಗಂಟೆ ಸಮಯದಲ್ಲಿ ನಡೆದಿದೆ.

ಬಾಡಾ ಕ್ರಾಸ್ ಬಳಿ ನಿಂತಿದ್ದಾಗ ಮೂವರು ಯುವಕರು ಸ್ಕೂಟಿಯಲ್ಲಿ ಬಂದು, ಇಲ್ಲಿ ನಿನ್ನೆ ಮೊನ್ನೆ ನನ್ನ ತಮ್ಮಂದಿರ ಮೊಬೈಲ್ ಕಿತ್ತುಕೊಂಡಿದ್ದಾರೆ. ಸಾಹೇಬರು ಕರೆಯುತ್ತಿದ್ದಾರೆ ಹೋಗೋಣ ಬಾ ಎಂದು ಅವರ ಸ್ಕೂಟರ್‌ನಲ್ಲಿ ಕೂರಿಸಿಕೊಂಡು ತೋಳಹುಣಸೆ ರಸ್ತೆ ಮೂಲಕ ಪೆಟ್ರೋಲ್ ಬಂಕ್ ಬಳಿ ಕೂರಿಸಿ, ಅಲ್ಲಿ ಜೇಬಿನಲ್ಲಿದ್ದ 500 ರೂ. ಕಸಿದುಕೊಂಡು ನಂತರ ಸ್ಕೂಟರ್‌ನಲ್ಲಿ ವಾಪಸ್ ಕರೆದುಕೊಂಡು ಅದೇ ಸ್ಥಳದಲ್ಲಿ ಬಿಟ್ಟು ಹೋಗಿದ್ದಾರೆ ಎಂದು ತ್ಯಾವಣಗಿಯ ಸಂಜು ಎಂಬುವವರು ಆರ್.ಎಂ.ಸಿ. ಯಾರ್ಡ್ ಠಾಣೆಯಲ್ಲಿ ದೂರು ನೀಡಿದ್ದಾರೆ.

# ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಮೇ 21- ರಾಜ್ಯ ಸರ್ಕಾರದ ಅಧಿಕಾರಿ / ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪಡೆಯಲು ನಾಮ ನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಜೂ.15 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

**80x120 ಅಡಿ ಅಳತೆಯ**
**3 ಅಂತಸ್ತಿನ ಕಟ್ಟಡ ಬಾಡಿಗೆಗೆ ಇದೆ**



ದಾವಣಗೆರೆ ನಗರ ನಿಜಲಿಂಗಪ್ಪ ಬಡಾವಣೆಯ ರಿಂಗ್ ರೋಡ್ ಸರ್ಕಲ್ ಹತ್ತಿರ, ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ಡೋರ್ ನಂ. 429, 430ರಲ್ಲಿ 80x120 ಅಡಿ ಅಳತೆಯ 135 ಚದುರಡಿಯ 1ನೇ ಮಹಡಿ, 2ನೇ ಮಹಡಿ, 3ನೇ ಮಹಡಿಯಿರುವ ಬಿಲ್ಡಿಂಗ್ ಖಾಲಿಯಿದ್ದು, ಬಾಡಿಗೆಗೆ ಇದೆ. ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್, ಲಿಫ್ಟ್ ಸೌಲಭ್ಯ ಹೊಂದಿದೆ. ಸಂಪೂರ್ಣ ಕಟ್ಟಡವು ಬ್ಯಾಂಕ್, ಶಾಲೆ, ಕಾಲೇಜು, ಸರ್ಕಾರಿ ಕಛೇರಿ, ಖಾಸಗಿ ಕಛೇರಿ, ವಾಣಿಜ್ಯ ಉದ್ಯಮಗಳಿಗೆ ಬಾಡಿಗೆಗೆ ದೊರೆಯುತ್ತದೆ.

**ಸಂಪರ್ಕಿಸಿ. 82961 18778**

**WANTED**

Required
***Sales Men & Sales Girls***
**to work in cloth Store.**

Interested can Apply with proper Resume along with Passport Size Photo Attested.

**ASHUJI DISTRIBUTORS**
#323, Binny Company Road, Davanagere.

# ಬಡದಾಳ್-ತಾರಾನಾಥ್ ಸೇರಿ ಹಲವರಿಗೆ ಮಾಧ್ಯಮ ಮಾಣಿಕ್ಯ ಪ್ರಶಸ್ತಿ



## ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಾಡಿದ್ದು ಕಾರ್ಯಕ್ರಮ

ದಾವಣಗೆರೆ, ಜೂ. 1- ಒಂದು ಪತ್ರಿಕೆ ರೂಪುಗೊಂಡು, ಅದು ಓದುಗರ ಕೈಗೆ ಸೇರುವ ಹಿನ್ನೆಲೆಯಲ್ಲಿನ ಶ್ರಮಿಕರಾದ ಪತ್ರಿಕಾ ಕಚೇರಿಯ ಎಂಟು ವಿಭಾಗಗಳ ನಿರ್ವಾಹಕರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದಾವಣಗೆರೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿ ನೀಡಿ ಗೌರವಿಸಲು ತೀರ್ಮಾನಿಸಲಾಗಿದೆ.

ಪ್ರತಿ ವರ್ಷ ಜುಲೈ 1ರ ಪತ್ರಿಕಾ ದಿನಾಚರಣೆ ಸಂದರ್ಭದಲ್ಲಿ ಪುರಸ್ಕೃತರಿಗೆ ಫಲಕ, ಗೌರವ ಧನ, ಫಲ-ಪುಷ್ಪಗಳನ್ನೊಳಗೊಂಡಂತೆ 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿ ನೀಡಲಾಗುತ್ತದೆ ಎಂದು ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

2022ರ ಸಾಲಿನಿಂದ ಈ ಪ್ರಶಸ್ತಿ ನೀಡಲುದ್ದೇಶಿಸಲಾಗಿದ್ದು, ಜೂನ್ 4ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಬ್ರಹ್ಮಾಕುಮಾರೀಸ್ ಸಂಸ್ಥೆಯ ಶಿವಧ್ಯಾನ ಮಂದಿರದಲ್ಲಿ ಏರ್ಪಾಡಾಗಿರುವ ಸಮಾರಂಭದಲ್ಲಿ 2022ರ ಸಾಲಿನ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಈ ಕಾರ್ಯಕ್ರಮಕ್ಕೂ ಮೊದಲು ಬೆಳಿಗ್ಗೆ 9.30ಕ್ಕೆ ಸಂಘದ ಜಿಲ್ಲಾ ಘಟಕದ 2022-23ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಏರ್ಪಾಡಾಗಿದೆ.

ವರದಿಗಾರರ ವಿಭಾಗದಲ್ಲಿ ಹಿರಿಯ ಪತ್ರಕರ್ತ 'ಕನ್ನಡಪ್ರಭ'ದ ನಾಗರಾಜ್ ಬಡದಾಳ್, ವಿದ್ಯುನ್ಮಾನ ವಿಭಾಗದಲ್ಲಿ ಹಿರಿಯ ಪತ್ರಕರ್ತ 'ದೂರದರ್ಶನ'ದ ಎ.ಎಲ್. ತಾರಾನಾಥ್, ಛಾಯಾಗ್ರಾಹಕ ವಿಭಾಗದಲ್ಲಿ ವಿವೇಕ್ ಎಲ್. ಬದ್ದಿ, 'ಜನತಾವಾಣಿ'ಯ ಪುಟ ವಿನ್ಯಾಸಕರಾದ ಶ್ರೀಮತಿ ಟಿ.ಎನ್. ಮಂಜುಳಾ ನಾಗರಾಜ್, ಜಾಹೀರಾತು ವಿಭಾಗದಲ್ಲಿ ಸಾಯಿ ಅಡ್ವರ್ಟೈಸರ್ಸ್‌ನ ಬಿ.ಎನ್. ಸಾಯಿಪ್ರಸಾದ್, ಮುದ್ರಣ ವಿಭಾಗದಲ್ಲಿ ಮಂಜು ಮುದ್ರಣದ ಎಂ. ನಾಗರಾಜ್, ಸಿಬ್ಬಂದಿ ವಿಭಾಗದಲ್ಲಿ ಹಿರಿಯ ತಂತ್ರಜ್ಞ ಬುಡೇನ್ ಸಾಬ್, ಪತ್ರಿಕಾ ವಿತರಕ ವಿಭಾಗದಲ್ಲಿ ಹಿರಿಯ ಪತ್ರಿಕಾ ವಿತರಕ ಎ.ಕೆ. ಶಿವಬಸಪ್ಪ ಅವರುಗಳು 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿಗೆ ಪುರಸ್ಕೃತರಾಗಿದ್ದಾರೆ.

ಅಲ್ಲದೇ, 2022-23ನೇ ಸಾಲಿನಲ್ಲಿ ವಿವಿಧ ಪ್ರಶಸ್ತಿಗಳ ಪುರಸ್ಕೃತ ಪತ್ರಕರ್ತರನ್ನು 'ಮಾಧ್ಯಮ ಚೂಡಾಮಣಿ' ಬಿರುದು ನೀಡಿ ಸನ್ಮಾನಿಸಲಾಗುತ್ತದೆ. ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, 'ಕರ್ನಾಟಕ ಎಕ್ಸ್‌ಪ್ರೆಸ್' ಸಂಪಾದಕ ಕೆ. ಚಂದ್ರಣ್ಣ, ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿ ಪುರಸ್ಕೃತರಾದ 'ನಗರವಾಣಿ' ಸಹ ಸಂಪಾದಕ ಬಿ.ಎನ್. ಮಲ್ಲೇಶ್, ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಆರ್.ಜಿ. ಹಳ್ಳಿ ನಾಗರಾಜ್, 'ಪ್ರಜಾವಾಣಿ'ಯ ಚಂದ್ರಹಾಸ ಹಿರೇಮಳಲಿ ಮತ್ತು ಎಲ್. ಮಂಜುನಾಥ್, 'ವಿಜಯ ವಾಣಿ'ಯ ಎನ್.ಡಿ.ಶಾಂತಕುಮಾರ್, ಹರಿಹರದ 'ಲೋಕಪ್ರಭಾ' ಸಂಪಾದಕರಾದ ಶ್ರೀಮತಿ ಡಿ.ಎನ್. ಶಾಂಭವಿ ನಾಗರಾಜ್ ಅವರುಗಳನ್ನು ಗೌರವಿಸಲಾಗುತ್ತದೆ.

ಇದೇ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಅಮ್ಮಂದಿರ ದಿನಾಚರಣೆ ಅಂಗವಾಗಿ ಮಹಿಳಾ ಪತ್ರಕರ್ತರನ್ನು 'ಮಾಧ್ಯಮ ರತ್ನ' ಬಿರುದು ನೀಡಿ ಗೌರವಿಸಲಾಗುತ್ತದೆ. ಜೊತೆಗೆ, ಅನಾರೋಗ್ಯದಿಂದ ಬಳಲುತ್ತಿರುವ 8 ಜನ ಪತ್ರಕರ್ತರಿಗೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ನಿಧಿಯಿಂದ ಸಹಾಯ ಧನದ ಚೆಕ್ ವಿತರಿಸಲಾಗುತ್ತದೆ.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ದಿವ್ಯ ಸಾನ್ನಿಧ್ಯದಲ್ಲಿ, ಬ್ರಹ್ಮಾಕುಮಾರೀಸ್ ಸಂಸ್ಥೆಯ ಹುಬ್ಬಳ್ಳಿ ವಲಯದ ನಿರ್ದೇಶಕರಾದ ರಾಜಯೋಗಿ ಬ್ರಹ್ಮಾಕುಮಾರ ಬಸವರಾಜ ರಾಜಋಷಿ ಕಾರ್ಯಕ್ರಮವನ್ನು ಉದ್ಘಾಟಿಸುವರು.

ತೋಟಗಾರಿಕೆ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿ ಪ್ರದಾನ ಮಾಡುವರು. ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮಹಿಳಾ ಪತ್ರಕರ್ತರನ್ನು ಗೌರವಿಸುವರು. ಹಿರಿಯ ಕೈಗಾರಿಕೋದ್ಯಮಿ ಅಥಣಿ ವೀರಣ್ಣ ಮತ್ತು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರುಗಳು ವಿವಿಧ ಪ್ರಶಸ್ತಿಗಳ ಪುರಸ್ಕೃತ ಪತ್ರಕರ್ತರನ್ನು ಸನ್ಮಾನಿಸುವರು. 'ಜನತಾವಾಣಿ' ಸಂಪಾದಕ ಎಂ.ಎಸ್.ವಿಕಾಸ್ ಮತ್ತು ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಅವರುಗಳು ಅನಾರೋಗ್ಯದಿಂದಿರುವ ಪತ್ರಕ ರ್ತರಿಗೆ ಸಹಾಯ ಧನದ ಚೆಕ್ ವಿತರಿಸುವರು.

ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಕೆಯುಡಬ್ಲ್ಯೂಜೆ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ದೇವರಮನೆ ಶಿವಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷ ಎನ್. ಆರ್. ನಾಗಭೂಷಣರಾವ್, ಲಯನ್ಸ್ ಕ್ಲಬ್ ಉಪಾಧ್ಯಕ್ಷ ಮಹಾಂತೇಶ್ ವಿ. ಒಣರೊಟ್ಟಿ ಅವರುಗಳು ಮುಖ್ಯ ಅತಿಥಿಗಳಾಗಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ರಾಜ್ಯಸಮಿತಿ ಸದಸ್ಯ ಕೆ. ಚಂದ್ರಣ್ಣ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ., ಒಡೆಯರ್, ಜಿಲ್ಲಾ ಖಜಾಂಚಿ ಎನ್.ವಿ. ಬದರಿನಾಥ್ ಮತ್ತಿತರರಿದ್ದರು.

# ಹರಿಹರ ತಾಲ್ಲೂಕಿನಲ್ಲಿ ಶೇ.58ರಷ್ಟು ಮಳೆ ಕೊರತೆ, ಬಿತ್ತನೆ ಕಾರ್ಯಕ್ಕೆ ಹಿನ್ನಡೆ



ಹರಿಹರ, ಜು. 1- ತಾಲ್ಲೂಕಿನಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗದೇ ಇರುವುದರಿಂದ ರೈತರು ಬಿತ್ತನೆ ಕಾರ್ಯಗಳನ್ನು ಮಾಡುವುದಕ್ಕೆ ಮುಂದಾಗಿಲ್ಲ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ನಾರನಗೌಡ್ರು ತಿಳಿಸಿದರು.

ಕಚೇರಿಯ ಆವರಣದಲ್ಲಿ ಪತ್ರಕರ್ತ ರೊಂದಿಗೆ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮುಂಗಾರು ಮಳೆಯಾಗಿಲ್ಲ. ಹರಿಹರ ತಾಲ್ಲೂಕಿಗೆ ಮೇ ಅಂತ್ಯಕ್ಕೆ ವಾಡಿಕೆ ಮಳೆ 116.7 ಮಿ.ಮೀ. ಆಗಿದೆ. ಆದರೆ, ವಾಸ್ತವಿಕವಾಗಿ 49.2 ಮಿ.ಮೀ. ಮಳೆ ಬಂದಿದೆ. ಶೇ.58ರಷ್ಟು ಮಳೆಯ ಕೊರತೆಯಾಗಿದೆ ಎಂದು ಹೇಳಿದರು.

ಈಗಾಗಲೇ ಇಲಾಖೆಯ ವತಿಯಿಂದ ರೈತರಿಗೆ ಬೇಕಾಗುವ ಬಿತ್ತನೆ ಬೀಜಗಳು ರಸಗೊಬ್ಬರ, ಕೀಟನಾಶಕಗಳ ವಿತರಣೆ ಮಾಡುವುದಕ್ಕೆ ದಾಸ್ತಾನು ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದರು. ನಗರದ ಬೀಜ, ಔಷಧಿ, ಗೊಬ್ಬರ ಅಂಗಡಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸ್ಟಾಕ್ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ. ಹಸಿ ಮಳೆ ಆದ ತಕ್ಷಣವೇ ಬಿತ್ತನೆ ಕಾರ್ಯ ಆರಂಭವಾಗಲಿದೆ ಎಂದರು.

ತಾಲ್ಲೂಕಿನಲ್ಲಿ ಬೇಸಿಗೆ ಹಂಗಾಮಿನಲ್ಲಿ 16 ಸಾವಿರದ 800 ಹೆಕ್ಟೇರ್ ಭತ್ತದ ನಾಟಿಯನ್ನು ಮಾಡಲಾಗಿತ್ತು. ಅದರಲ್ಲಿ ಈಗಾಗಲೇ 4 ಸಾವಿರ ಹೆಕ್ಟೇರ್ ಭತ್ತದ ಕಟಾವು ಮಾಡಲಾಗಿದೆ. ಉಳಿದಂತೆ ಭತ್ತದ ಕಟಾವು ಕಾರ್ಯ ನಡೆಯುತ್ತಿದ್ದು. ಮಳೆ ಬೀಳುವ ಸಾಧ್ಯತೆ ಕೂಡ ಇದ್ದು, ಮುಂದೆ ದೊಡ್ಡ ಪ್ರಮಾಣದ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇರುವುದರಿಂದ ಆದಷ್ಟು ಬೇಗ ಭತ್ತದ ಕಟಾವು ಕಾರ್ಯವನ್ನು ಮುಗಿಸಿಕೊಳ್ಳುವಂತೆ ರೈತರಿಗೆ ತಿಳಿಸಲಾಗಿದೆ ಎಂದು ಕೃಷಿ ಅಧಿಕಾರಿ ನಾಗನಗೌಡ್ರು ತಿಳಿಸಿದರು.

## ವಿದ್ಯುತ್ ಪೂರೈಕೆ : ನಗರದಲ್ಲಿ ಇಂದು ರೈತರ ಪ್ರತಿಭಟನೆ

ರೈತರಿಗೆ ಸಮರ್ಪಕ ವಿದ್ಯುತ್ ನೀಡದೆ ತೊಂದರೆಯಾಗುತ್ತಿರುವುದರಿಂದ ಮಾಯಕೊಂಡ ಗ್ರಾಮದ ಕೆಇಬಿ ಕಚೇರಿ ಬಳಿ ಇಂದು ಬೆಳಿಗ್ಗೆ 11 ಕ್ಕೆ ರೈತ ಸಂಘದಿಂದ ಪ್ರತಿಭಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣಬೇರು ಕುಮಾರಸ್ವಾಮಿ ತಿಳಿಸಿದರು.




## ಅಂಧ ಮಕ್ಕಳ ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಜೂ.1- 2023-24 ನೇ ಸಾಲಿನ ಜಿಲ್ಲೆಯ ಅಂಧ ಮಕ್ಕಳ ಸರ್ಕಾರಿ ವಸತಿಯುತ ಶಾಲೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅಂಧ ಹೆಣ್ಣು ಮಕ್ಕಳಿಗೆ 1 ರಿಂದ 10 ನೇ ತರಗತಿಯವರೆಗೆ ಉಚಿತ ವಸತಿಯಿದ್ದು, ಗಂಡು ಮಕ್ಕಳಿಗೆ ವಸತಿ ರಹಿತ ಶಿಕ್ಷಣ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಅಧೀಕ್ಷಕರು, ಅಂಧ ಮಕ್ಕಳ ಸರ್ಕಾರಿ ವಸತಿಯುತ ಪಾಠ ಶಾಲೆ, ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್, ಶಿವಾಲಿ ಚಿತ್ರ ಮಂದಿರದ ಹತ್ತಿರ ದಾವಣಗೆರೆ ಅಥವಾ ದೂ.99645 34 883, 94813 58884, 08192-250442 ಗೆ ಸಂಪರ್ಕಿಸಬಹುದು.

## ಐಟಿಐ ಪ್ರವೇಶಕ್ಕೆ ಅವಧಿ ವಿಸ್ತರಣೆ

ಚನ್ನಗಿರಿ, ಜೂ. 1- 2023-24ನೇ ಸಾಲಿನ ಐಟಿಐ ಪ್ರವೇಶಕ್ಕೆ ಜೂನ್ 9ರ ವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಸಂಸ್ಥೆಯು ಎನ್‌ಸಿವಿಟಿ ಯಿಂದ ಸಂಯೋಜನೆ ಪಡೆದ ಎಲೆಕ್ಟ್ರೀಷಿಯನ್, ಫಿಟ್ಟರ್, ಎಂ.ಆರ್ ಹಾಗೂ ಎ.ಸಿ, ಎಂ.ಇ.ವಿ ಮತ್ತು ಅಡ್ವಾನ್ಸ್ ಸಿ.ಎನ್.ಸಿ ವೃತ್ತಿಗಳಿವೆ. ಅರ್ಜಿಯನ್ನು ಚನ್ನಗಿರಿಯ ಸರ್ಕಾರಿ ಐ.ಟಿ.ಐ ಗೆ ಕಛೇರಿ ಸಮಯದಲ್ಲಿ ಅಥವಾ ಹತ್ತಿರದ ಸೈಬರ್ ಸೆಂಟರ್‌ನ ಆನ್‌ಲೈನ್ ಸಲ್ಲಿಸಬಹುದು. ಸಂಪರ್ಕಿಸಿ : ದೂ.9844710844, 9738782540.

## ಪಡಿತರ ಚೀಟಿದಾರರಿಗೆ ಇಕೆವೈಸಿಗೆ ಅವಕಾಶ

ದಾವಣಗೆರೆ, ಜೂ.1- ದಾವಣಗೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ 9356 ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ(ಬಿ.ಪಿಎಲ್) ಪಡಿತರ ಚೀಟಿಗಳಲ್ಲಿನ ಸದಸ್ಯರ ಇಕೆವೈಸಿ ಬಾಕಿ ಇದ್ದು, ಪ್ರತಿದಿನ ಬೆಳಿಗ್ಗೆ 7 ರಿಂದ ರಾತ್ರಿ 8 ರವರೆಗೆ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪಡಿತರ ಫಲಾನುಭವಿಗಳು ಸದಸ್ಯರ ಇಕೆವೈಸಿ ತುರ್ತಾಗಿ ಪೂರ್ಣಗೊಳಿಸಿ ಎಂದು ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ತಿಳಿಸಿದ್ದಾರೆ.


ಅತಿಥ್ಯ At!thYA Restaurant
ROYAL DINE PURE VEG
CAFE GARDEN

ಅತಿಥ್ಯ ರೆಸ್ಟೋರೆಂಟ್ ಹೋಟೆಲ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ

| | | | |
|---|---|---|---|
| • ದೋಸೆ ಮಾಸ್ಟರ್ | : 02 | • ಸಪ್ಲೈಯರ್ಸ್ | : 01 |
| • ಟೀ ಮೇಕರ್ | : 02 | • ಮ್ಯಾನೇಜರ್ಸ್ | : 01 |
| • ಹೆಲ್ಪರ್ | : 02 | • ಸೂಪರ್‌ವೈಸರ್ | : 01 |
| • ಸೌತ್ ಇಂಡಿಯನ್ ಕುಕ್ | : 02 | • ಕ್ಲೀನರ್ | : 02 |

M : 96068 47121, 63661 04640

WALK-IN INTERVIEW
MARKETING EXECUTIVE (MALE) Ideal
for IDEAL ICE CREAM in & around DAVANAGERE with Good Communication Skills & owning a Two Wheeler
Preference will be given to candidates with experience in FMCG
Walk-in-interview on 02.06.2023, 10.00 am to 5.00 pm
at Sri Associates, 12/B, KIADB Lokikere Road, Davanagere Industrial Area.
CONTACT
9480316177 | 8277537950


